# ಹೊಸ ಬಂಡಿಗಳು

ದಸರಾ ಹಬ್ಬದ ಕಂತು – 2015




















http://honalu.net

# ಮುನ್ನುಡಿ

ಬಾರತ ಇಂದು ಬಂಡಿ ಮಾರಾಟಕ್ಕೆ ಬಲು ದೊಡ್ಡ ಮಾರುಕಟ್ಟೆ. ವರುಶದಿಂದ ವರುಶಕ್ಕೆ ಹೊಸ ಬಂಡಿ ಕೂಟಗಳು ಬಾರತಕ್ಕೆ ಲಗ್ಗೆ ಇಡುತ್ತಿವೆ. ಅದರಂತೆ ಹೊಚ್ಚ ಹೊಸ ಬಂಡಿಗಳು ತಯಾರಾಗಿ ಮಾರುಕಟ್ಟೆಯತ್ತ ದಾಪುಗಾಲು ಹಾಕಿವೆ. ಪುಟಾಣಿ ಕಾರು, ಹಿಂಗದ (hatchback) ಕಾರು, ಆಟೋಟದ ಬಂಡಿ, ಹಲಬಳಕೆಯ ಬಂಡಿ ಹೀಗೆ ಹತ್ತಾರು ಬಗೆಯ ವಿವಿದ ಕೂಟಗಳ ಬಂಡಿಗಳು ನಿಮ್ಮ ಸುತ್ತಲಿನ ಬಂಡಿ ಮಳಿಗೆಗಳಲ್ಲಿ ಕಂಡು ಬರುತ್ತವೆ.

ಈ ವರುಶವನ್ನಂತೂ 'ಹೊಸ ಬಂಡಿಗಳ ವರುಶ' ಎಂದೇ ಕರೆಯಬಹುದು. ಅಶ್ಟೊಂದು ಹೊಸ ಹೊಸ ಬಂಡಿಗಳು ಬಿಡುಗಡೆಯಾಗಿವೆ, ಆಗುತ್ತಲಿವೆ. ನಾಗರ ಪಂಚಮಿ, ವರ ಮಹಾಲಕ್ಶ್ಮೀ, ಗಣೇಶ ಹಬ್ಬ ಹೀಗೆ ಸಡಗರದ ದಿನಗಳು ಸಾಲು ಸಾಲಾಗಿ ಬರುತ್ತಿದ್ದರೆ ಹೊಸ ಬಂಡಿಗಳು ಬಲು ವೇಗದಲ್ಲಿ ಬಿಡುಗಡೆಯಾಗಿ ಕೊಳ್ಳುಗರಿಗಾಗಿ ಕಾಯುತ್ತಿವೆ.

ಹಬ್ಬದ ಸಂದರ್ಬದಲ್ಲಿ ಕೊಳ್ಳುವುದೆಂದರೆ ನಮ್ಮ ಮಂದಿಗೆ ಬಲು ಅಚ್ಚುಮೆಚ್ಚು. ಮಾರುವವರಿಗಂತೂ ಸುಗ್ಗಿ ಕಾಲವೇ ಸರಿ. ಕೆಲವರು ಬೆಳ್ಳಿ-ಬಂಗಾರ ಕೊಂಡರೆ, ಕೆಲವರು ಹೊಸ ಮನೆ, ಹೊಲ ಕೊಳ್ಳುವುದರಲ್ಲಿರುತ್ತಾರೆ. ಇನ್ನೂ ಕೆಲವರು ಇಗ್ಗಾಲಿ ಬಂಡಿಯನ್ನೋ ಇಲ್ಲವೇ ನಾಲ್ಗಾಲಿ ಬಂಡಿಯನ್ನೋ ಕೊಂಡು ಹಬ್ಬದ ನಲಿವನ್ನು ಆಚರಿಸುತ್ತಾರೆ. ಹಬ್ಬಕ್ಕೆ ಹೊಸ ಬಂಡಿಯ ಕೊಳ್ಳುವ ಹುಚ್ಚು ಹೇಗಿದೆಯೆಂದರೆ ಇತ್ತೀಚೆಗೆ ವರ ಮಹಾಲಕ್ಶ್ಮಿ ಹಬ್ಬಕ್ಕೆ ಮಾರುತಿ ಸುಜುಕಿ ಕೂಟ ಕರ್ನಾಟಕವೊಂದರಲ್ಲೇ 1600 ಕ್ಕೂ ಹೆಚ್ಚು ಕಾರುಗಳನ್ನು ಮಾರಾಟ ಮಾಡಿತ್ತು. ಗಣೇಶ ಹಬ್ಬದ ದಿನ ಮಹಾರಾಶ್ಟ್ರ, ಗುಜರಾತ್, ಮದ್ಯಪ್ರದೇಶ ಮತ್ತು ಚತ್ತೀಸ್ ಗಡ ಈ ನಾಲ್ಕೇ ರಾಜ್ಯಗಳಲ್ಲಿ 1100 ಟಾಟಾ ಬಂಡಿಗಳು ಕೊಳ್ಳುಗರ ಮನೆ ಸೇರಿದ್ದವು.

ಇದೀಗ ದಸರಾ ಹಬ್ಬದ ಹೊಸ್ತಿಲಲ್ಲಿ ಇದ್ದೇವೆ. ಈ ವರುಶದಲ್ಲಿ ಬಿಡುಗಡೆಯಾದ ಪ್ರಮುಕ ಬಂಡಿಗಳ ಬರಹಗಳನ್ನು ಹೊನಲಿನಲ್ಲಿ ಓದಿರುವಿರಿ. ಈ ಎಲ್ಲ ಬರಹಗಳನ್ನು ಒಂದೆಡೆ ಸೇರಿಸಿ ನಾಡ ಹಬ್ಬಕ್ಕೆ ಹೊಸ ಬಂಡಿಯೊಂದನ್ನು ಕೊಳ್ಳುವವರಿಗೆ ನೆರವಾಗಲೆಂದು ಈ ಪುಟ್ಟ ಕಯ್ಪಿಡಿ.

- **ಜಯತೀರ್ತ ನಾಡಗವ್ಡ**

**ತಿಳಿಸುವಿಕೆ:**

ಈ ಹೊತ್ತಗೆಯಲ್ಲಿರುವ ಎಲ್ಲಾ ಬರಹಗಳ ಹಕ್ಕುಗಳು ಬರಹಗಾರರು ಮತ್ತು ಹೊನಲು ತಂಡಕ್ಕೆ ಸೇರಿವೆ. ಬರಹಗಳ ಆಯ್ದ ಬಾಗವನ್ನು ಇಲ್ಲವೇ ಇಡೀ ಬರಹವನ್ನು ಬೇರೆ ಕಡೆ ಬಳಸಿಕೊಳ್ಳಲು ಬಯಸುವವರು ಬರಹದಲ್ಲಿ ಇಲ್ಲವೇ ಲಿಪಿಯಲ್ಲಿ ಯಾವುದೇ ಮಾರ್ಪಾಡುಗಳನ್ನು ಮಾಡದೇ, ಬರಹಗಾರರ ಹೆಸರನ್ನು ಮತ್ತು ಹೊನಲು ಮಿಂಬಾಗಿಲಿನಿಂದ (honalu.net) ಪಡೆದುಕೊಳ್ಳಲಾಗಿದೆ ಎಂದು ತಿಳಿಸುತ್ತಾ ಬಳಸಿಕೊಳ್ಳಬಹುದು. ಬರಹಗಳಲ್ಲಿ ಬಳಸಿರುವ ಚಿತ್ರಗಳ ಸೆಲೆಗಳನ್ನು ಆಯಾ ಬರಹದ ಕೆಳಗಡೆ ಕೊಡಲಾಗಿದ್ದು, ಅವುಗಳ ಹಕ್ಕುಗಳು ಆ ಸೆಲೆಗಳದ್ದಾಗಿರುತ್ತದೆ.

**ಮುಂಪುಟ ಕಟ್ಟಣೆ** : ರತೀಶ ರತ್ನಾಕರ

**ಹೊರಹೊಮ್ಮಿಕೆ** : 20.10.2015

**ಮಿಂಬಲೆಯ ವಿಳಾಸ** : http://honalu.net/

**ಮಿಂಚೆ** : minche@honalu.net

# ಒಳನೋಟ


1. ಪುಟಿಯಲಿದೆ ಪಿಗೊ ಅಸ್ಪಾಯರ್ 01 - 04
2. ಮಯ್ಲಿಯೋಟದ ಮುಂದಾಳು - ಡೀಸೆಲ್ ಸೆಲೆರಿಯೊ 05 - 06
3. ಬಂದಿದೆ ಹೊಸದೊಂದು ಬಗೆಯ ಬಂಡಿ! 07 - 10
4. ಇಂದು ಜಗಮಗಿಸಲಿದ ಹೊಂಡಾ ಜಾಜ್ 11 - 14
5. ಕಂಗೊಳಿಸಲಿದೆ ಹೊಸ್ ಹ್ಯುಂಡಾಯ್ ಕ್ರೇಟಾ 15 - 18
6. ಇಂದು ಬಿಡುಗಡೆಯಾಗಲಿದೆ ಮಾರುತಿ ಸುಜುಕಿ S-CROSS 19 - 23
7. ಮಹೀಂದ್ರಾ ಹೊರತಂದ ಜಗಜಟ್ಟಿ ಮಲ್ಲ - TUV3OO 24 - 29
8. ಅಗ್ಗದ ಕಾರುಗಳ ಕಾವೇರಿಸಿದ ಕ್ವಿಡ್ 30 - 36
9. ಇಗೊ ಬಂದಿದೆ ಹೊಸ ಪಿಗೊ 37 - 42

# ಪುಟಿಯಲಿದೆ ಫಿಗೊ ಅಸ್ಪಾಯರ್

**19.05.2015**




ಇಂಡಿಯಾದೆಲ್ಲೆಡೆ ಕಳೆದ 2-3 ವರುಶಗಳಲ್ಲಿ ಕಿರು ಕಾರುಗಳದ್ದೇ ಸದ್ದು. ಕಿರು ಸೆಡಾನ್ ಆಗಿರಲಿ ಇಲ್ಲವೇ ಕಿರು ಹಲಬಳಕೆ ಬಂಡಿಗಳೇ ಇರಲಿ ಇವುಗಳು ಮಂದಿಗೆ ಮೆಚ್ಚುಗೆಯಾಗಿವೆ. ಅದರಲ್ಲೂ ನಾಲ್ಕು ಮೀಟರ್ ಮತ್ತು ಅದಕ್ಕಿಂತ ಕಡಿಮೆ ಉದ್ದದ ಕಿರು ಸೆಡಾನ್ ಗಳಿಗೆ ಎಲ್ಲಿಲ್ಲದ ಬೇಡಿಕೆ. ಕಳೆದ ಕೆಲ ವರುಶಗಳಲ್ಲಿ ನಾಲ್ಕು ಮೀಟರ್ ಹಾಗೂ ಅದಕ್ಕಿಂತ ಕಡಿಮೆ ಉದ್ದದ ಬಂಡಿಗಳ ಮೇಲೆ ಸರಕಾರ ತೆರಿಗೆ ಕಡಿತ ಮಾಡಿರುವುದು ಇದರ ಹಿಂದಿರುವ ಕಾರಣ.

ಹೋಂಡಾ ಅಮೇಜ್, ಟಾಟಾ ಜೆಸ್ಟ್, ಮಾರುತಿ ಸುಜುಕಿ ಡಿಜಾಯರ್, ಹ್ಯುಂಡಾಯ್ ಎಕ್ಸೆಂಟ್ ಮುಂತಾದ ಕಿರು ಸೇಡಾನ್‌ಗಳ ಪಟ್ಟಿಗೆ ಸೇರ್‍ಪಡೆಗೊಳ್ಳಲು ಇದೀಗ **ಪೋರ್ಡ್** ನವರ ಹೊಚ್ಚ ಹೊಸ **ಫಿಗೊ ಅಸ್ಪಾಯರ್** (Figo Aspire) ಕಾರು ಬರುತ್ತಿದೆ. ಈ ಗುಂಪಿನ ಕಾರುಗಳಲ್ಲಿ ಇನ್ನೂ ಸೆಣಸಾಟ ಚುರುಕುಗೊಳ್ಳುವುದು ದಿಟವಾಗಿದೆ.

ಫಿಗೊ ಹಿಂಗದ ಕಾರು (hatchback) ಹಾಗೂ ಎಕೊ-ಸ್ಪೋರ್‍ಟ್ ಹಲಬಳಕೆಯ (multi utility) ಬಂಡಿಗಳನ್ನು ಮಾರುಕಟ್ಟೆಗಿಳಿಸಿ ಪೋರ್ಡ್ ಕಾರು ಕೊಟ ಕೊಳ್ಳುಗರ ಅಚ್ಚುಮೆಚ್ಚು ಎನ್ನಿಸಿತ್ತು. ಈ ಮಾದರಿಗಳ ಬೇಡಿಕೆ ಹೇಗಿತ್ತೆಂದರೆ ಕೊಳ್ಳಲು ಮುಂಗಡ ಹಣ ನೀಡಿ 3 ರಿಂದ 6 ತಿಂಗಳವರೆಗೆ ಕಾಯಬೇಕಾದ ಪರಿಸ್ತಿತಿ. ಇದೇ ಕಾರಣಕ್ಕೆ ಪೋರ್ಡ್ ಕೆಲ ಕೊಳ್ಳುಗರನ್ನು ಕಳೆದುಕೊಂಡು ಹಿನ್ನಡೆ ಕೂಡ ಅನುಬವಿಸಿದ್ದುಂಟು. ಇದೀಗ ಅದೇ ಫಿಗೊ ಮತ್ತು ಎಕೊ-ಸ್ಪೋರ್‍ಟ್ ಗೆಲುವನ್ನು ಕಾಯ್ದುಕೊಳ್ಳುವ ಹವಣಿಕೆಯಲ್ಲಿ ಫಿಗೊ ಅಸ್ಪಾಯರ್ ಬಿಡುಗಡೆಗೊಳಿಸಲು ಮುಂದಾಗಿದೆ.

ಬೇಡಿಕೆ ಮೇಲೆರುತ್ತ ಕೊಳ್ಳುಗರ ಕಾಯುವಿಕೆ ಹೆಚ್ಚಾಗಿದ್ದರಿಂದ 3 ವರುಶಗಳ ಹಿಂದೆ ಪೋರ್ಡ್ ನವರು ಗುಜರಾತಿನ ಸಾನಂದನಲ್ಲಿ ಇಂಡಿಯಾದ ಎರಡನೇ ಕಾರ್‍ಕಾನೆ ಕಟ್ಟುವ ತೀರ್‍ಮಾನ ಮಾಡಿದ್ದರು. ಇದೇ ಕಾರ್‍ಕಾನೆಯಿಂದ ಹೊರಬರುತ್ತಿರುವ ಮೊದಲ ಕಾರು ಫಿಗೊ ಅಸ್ಪಾಯರ್ ಎನ್ನುವುದು ವಿಶೇಶ.

2014ರ ಇಂಡಿಯಾದ ಬಂಡಿ ತೋರ್‍ಪಿನಲ್ಲಿ ಪೋರ್ಡ್ ಮಳಿಗೆಯಲ್ಲಿ ಈ ಕಾರು ಕಾಣಿಸಿಕೊಂಡು ಸುದ್ದಿ ಮಾಡಿತ್ತು. ಸುಮಾರು ಒಂದುವರೆ ವರುಶದ ನಂತರ ಅಂದರೆ ಈ ತಿಂಗಳ ಕೊನೆಯಲ್ಲಿ ಫಿಗೊ ಅಸ್ಪಾಯರ್ ಬೀದಿಗಿಳಿಯುವ ಹೊತ್ತು ಕೂಡಿಬಂದಂತಿದೆ. ಇಂಡಿಯಾದ 25 ದೊಡ್ಡ ಊರುಗಳಲ್ಲಿ ಈ ಬಂಡಿಯನ್ನು ಹಲವಾರು ಮಂದಿಗೆ ತೋರಿಸಿ ಅವರಿಗಾದ ಮೊದಲ ಅನುಬವ ಪಡೆದು ಮಾರಾಟಕ್ಕೆ ಪೂರ್‍ತಿ ಅಣಿಯಾಗಿರುವ

ಹೊಸ ಫಿಗೊ ಅಸ್ಪಾಯರ್ ಕಾರಿನ ಬಗ್ಗೆ ಹೆಚ್ಚಿನ ಮಾಹಿತಿ ಹೊರಬಂದಿಲ್ಲವಾದರೂ, ಪೋರ್ಡ್ ಕೂಟದ ಮಿಂದಾಣದಲ್ಲಿ ಮತ್ತು ಮಿಂಬಲೆಯ ಇತರೆಡೆ ದೊರೆತ ಮಾಹಿತಿಗಳ ಆದಾರದ ಮೇಲೆ ಈ ಕೆಳಗಿನ ಮಾಹಿತಿಗಳನ್ನು ನೀಡಿರುವೆ.

**ಬಿಣಿಗೆ (Engine):**

ಅಸ್ಪಾಯರ್ ಬಂಡಿ 1.2 ಲೀಟರ್ ಅಳತೆಯ ಪೆಟ್ರೋಲ್ ಹಾಗೂ ಒಂದುವರೆ ಲೀಟರ್ ಡೀಸೆಲ್ ಬಿಣಿಗೆಗಳನ್ನು ಹೊಂದಿರಲಿದೆ. ಆದರೆ ಈ ಮುಂಚೆ ಫಿಗೊ ಕಾರು ಹೊಂದಿದ್ದ 1.2 ಲೀ ಡ್ಯುರಾಟೆಕ್ (Duratec) ಬಿಣಿಗೆ ಇದರಲ್ಲಿ ಇಲ್ಲ. ಅದರ ಬದಲಾಗಿ ಹೊಚ್ಚ ಹೊಸ ಟಿಆಯ್-ವಿಸಿಟಿ (Ti-VCT) ಎಂಬ ಹೊಸ ಬಿಣಿಗೆಗೊಂದನ್ನು ಇದರಲ್ಲಿ ಅಳವಡಿಸಿದೆ. ಟಿಆಯ್-ವಿಸಿಟಿಯನ್ನು ಹೊಸ ಚಳಕ ಬಳಸಿ ಬೆಳೆಸಲಾಗಿದೆ ಎಂದು ಪೋರ್ಡ್ ಹೇಳಿಕೊಂಡಿದೆ. ಇದರಿಂದ ಹೆಚ್ಚಿನ ಉರುವಲು ಅಳವುತನ (fuel efficiency), ಹೆಚ್ಚು ಕಸುವು ಮತ್ತು ಈ ಬಿಣಿಗೆ ಕಡಿಮೆ ಕೆಡುಗಾಳಿಯನ್ನು ಹೊರ ಉಗುಳಲಿದೆ ಎಂದು ಪೋರ್ಡ್ ಕೂಟ ತಿಳಿಸಿದೆ. ಅಸ್ಪಾಯರ್ ಪೆಟ್ರೋಲ್ ಬಿಣಿಗೆ 85 ರಿಂದ 90 ಕುದುರೆಬಲ (horse power) ಕಸುವುಂಟುಮಾಡಲಿದೆ ಮತ್ತು ಇದು ಪ್ರತಿ ಲೀಟರ್ ಗೆ 16-18 ಕಿ.ಮೀ. ಓಡಬಹುದು ಎನ್ನುವ ಮಾತುಗಳು ಕೇಳಿಬರುತ್ತಿವೆ.




ಮೊದಲಿನ ಫಿಗೊ ಡೀಸೆಲ್ ಮಾದರಿ ಕಾರಿನಲ್ಲಿದ್ದ 1.4 ಲೀಟರ್ ಡ್ಯುರಾಟಾರ್ಕ್(Duratorq) ಬಿಣಿಗೆ ಬದಲು 1.5 ಲೀಟರ್ ನ ಟಿಡಿಸಿಆಯ್(TDCI) ಬಿಣಿಗೆಯನ್ನು ಇದಕ್ಕೆ ಅಳವಡಿಸಿದೆ. 1.5 ಲೀ ಟಿಡಿಸಿಆಯ್ ಈಗಾಗಲೇ ಪೀಯಸ್ತಾ (FIESTA), ಎಕೊ-ಸ್ಪೋರ್ಟ್(Eco-Sport) ಮಾದರಿಗಳಲ್ಲಿ ಓಡುತ್ತಿದೆ. ಇದೇ ಬಿಣಿಗೆಯನ್ನು ಓಡಿಸುಗಾರಿಕೆಗೆ ತಕ್ಕಂತೆ ಕೆಲವು ಸಣ್ಣ ಪುಟ್ಟ ಮಾರ್ಪಾಡುಗಳನ್ನು ಮಾಡಿ ಚೊಕ್ಕಟವಾಗಿಸಿದೆ. ಡಿಸೇಲ್ ಅಸ್ಪಾಯರ್ 95-105 ಕುದುರೆಬಲ ನೀಡಿ, ಪ್ರತಿ ಲೀಟರ್ ಗೆ 25-27 ಕಿ.ಮೀ..ವರೆಗೂ ಓಡಲಿದೆ ಎಂಬ ಸುದ್ದಿಗಳು ಬಂದಿವೆ.

**ಸಾಗಣಿ (transmission):**

ಫಿಗೊ ಅಸ್ಪಾಯರ್ ನ ತನ್ನಿಡಿತ ಸಾಗಣಿಯು (automatic transmission) ಉರುವಲು ಅಳವುತನ ಕಡಿಮೆಗೊಳಿಸುವುದಶ್ಟೇ ಅಲ್ಲದೇ ನಿಮ್ಮ ಓಡಿಸುತನವನ್ನು (Driveability) ಹಿತಗೊಳಿಸುತ್ತದೆ. ಇದರಲ್ಲಿ ಇಬ್ಬಗೆ ಬೇರ್ಪಡಕವಿದ್ದು (dual clutch) ನಿಮ್ಮ ಕಾರಿನ ಹಲ್ಗಾಲಿ (gear) ಬದಲಾಯಿಸುವುದನ್ನು ಸುಲಬಗೊಳಿಸುತ್ತದೆ. ಓಡಿಸುಗನ ಹಿಡಿತದ ಸಾಗಣಿ (manual transmission) ಇಶ್ಟಪಡುವವರಿಗೆ ಇದರಲ್ಲಿ 5-ವೇಗದ ಸಾಗಣಿ ಕೂಡ ಇದೆ.

**ಕಾಪಿನ ವಿಶೇಶತೆ (safety features):**

ಈ ಬಂಡಿಯಲ್ಲಿ ಕಾಪಿಗೆ ಹೆಚ್ಚಿನ ವಿಶೇಶತೆ ನೀಡಲಾಗಿದೆ. ಕಾರಿನಲ್ಲಿ ಕೂತಿರುವ ಎಲ್ಲ ಪಯಣಿಗರಿಗೆ ಅನುಕೂಲವಾಗಲೆಂದು 6 ಗಾಳಿಚೀಲಗಳು (Airbags) ಇದರಲ್ಲಿ ನೀಡಲಾಗಿದ್ದು, ಗುದ್ದುವಿಕೆ ಮುಂತಾದ ಅವಗಡಗಳು ಉಂಟಾದಾಗ ಇವುಗಳು ಪಯಣಿಗರನ್ನು ಕಾಪಾಡುತ್ತವೆ. ಇಂದಿನ ಬಹುತೇಕ ಕಿರು ಸೆಡಾನ್ ಕಾರುಗಳಲ್ಲಿ ಎರಡು ಗಾಳಿಚೀಲ ಕೊಟ್ಟರೆ ಅದೇ ಹೆಚ್ಚು, 6 ಗಾಳಿಚೀಲಗಳು ಬೇಕೆಂದರೆ ನೀವು ಹೆಚ್ಚಿನ ಹಣ ತೆರಬೇಕಾಗುತ್ತದೆ. ಫಿಗೋ ಅಸ್ಪಾಯರ್ ಈ ವಿಶಯದಲ್ಲಿ ವಿಶೇಶವಾಗುತ್ತದೆ.

**ಒಳ ಮಯ್ -ಹೊರ ಮಯ್:**

ದಿಟ್ಟ, ಗಟ್ಟಿಮುಟ್ಟಾದ ಹೊರಮಯ್ ನೋಟ ಇತರೆ ದುಬಾರಿ ಕಾರುಗಳಂತೆ ತೋರುತ್ತದೆ. ಈ ಸಾಲಿನ ಇತರೆ ಕಿರು ಸೆಡಾನ್ ಬಂಡಿಗಳ ಹೋಲಿಕೆಯಲ್ಲಿ ಅಸ್ಪಾಯರ್ ಹಿಂದೆ ಬಿದ್ದಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಹೊರಮಯ್ ಮೂಲಕ ಕಾರು ಹಲವರಿಗೆ ಮೆಚ್ಚುವಂತಿದೆ.

ಬಲು ಮುಕ್ಯವಾದ ಒಳಮಯ್ ಕೂಡ ಅಶ್ಟೇ ಮನಸೆಳೆಯುವಂತಿದೆ. ನಾಲ್ವರು ಕೂಡಲು ಸಾಕಶ್ಟು ಜಾಗವಿದ್ದು ಕಾಲು ಚಾಚಲು ಮುಂಬದಿ-ಹಿಂಬದಿಯ ಎಲ್ಲ ಪಯಣಿಗರಿಗೆ ಯಾವುದೇ ತೊಂದರೆ ಎನ್ನಿಸುವುದಿಲ್ಲ. ಕೂರುಮಣೆ ತೊಗಲು (leather) ಹಾಗೂ ಏರಿಳಿಸುವ ತಲೆಯೂರುಕಗಳು(height adjustable headrest) ನಿಮ್ಮ ದೂರದ ಪಯಣಗಳನ್ನು ದಣಿವಿರದಂತೆ ಮಾಡುತ್ತವೆ.



ನೀರಿನ ಬಾಟಲಿ, ಪ್ಲ್ಯಾಸ್ಟಿಕ್/ಹಾಳೆಯ ಕಾಪಿ ಲೋಟ ಇಲ್ಲವೇ ಕೊಡೆಗಳನ್ನು ನಿಮ್ಮ ಪಕ್ಕಕ್ಕಿರಿಸಲು ಮತ್ತು ಚಿಲ್ಲರೆ ನಾಣ್ಯ ಕೂಡಿಡಲು ಬಾಗಿಲ ಬದಿಗೆ ಬೇರೆ ಬೇರೆ ಗೂಡುಗಳನ್ನು(cup holder, coin holder) ನೀಡಲಾಗಿದೆ. ಜಾರದಂತ ಬಟ್ಟೆ (anti-skid cloth) ಬಳಸಿ ಅಲೆಯುಲಿ (mobile) ಸುಲಬವಾಗಿ ಇಡಲು ಕೂಡ ಇನ್ನೊಂದು ಗೂಡು ಇದರಲ್ಲಿದೆ. ಅಲೆಯುಲಿಯನ್ನು ತಲುಪುದಾರಿಗಳಾಗಿ (navigation) ಬಳಸುವ ಓಡಿಸುಗರಿಗೆ ನೆರವಾಗಲೆಂದು ತೋರುಮಣೆಯ (dashboard) ಮುಂಬಾಗದಲ್ಲಿ ವಿಶೇಶವಾಗಿ ಪುಟ್ಟ ಗೂಡೊಂದನ್ನು ಒದಗಿಸಿದ್ದು ಕಾರಿನ ವಿಶೇಶಗಳಲ್ಲೊಂದು. ಕಾರಿನ ಹಿಂಬದಿಯ ಸರಕು ಚಾಚಿನಲ್ಲೂ (bootspace) ನಾಲ್ಕಾರು ದೊಡ್ಡ ಚೀಲಗಳನ್ನು ಸಲೀಸಾಗಿ ಇಡುವ ಏರ್ಪಾಟು ಒದಗಿಸಿದ್ದಾರೆ.

ಬಣ್ಣಗಳು:



ಇಲ್ಲಿಯವರೆಗೆ ವಿವಿದ ತೋರ್ಪುಗಳಲ್ಲಿ ಮತ್ತು ಪೋರ್ಡ್ ಮಿಂದಾಣದಲ್ಲಿ ಕಾಣಿಸಿಕೊಂಡಿರುವ ಪಿಗೊ ಅಸ್ಪಾಯರ್ ಕಡುಗೆಂಪು ಬಣ್ಣದಲ್ಲಿ. ಹೀಗಾಗಿ ಈ ಬಣ್ಣದ ಅಸ್ಪಾಯರ್ ಸಿಗುವುದು ಕಚಿತವಾಗಿದೆ. ಇತರೆ ಯಾವ ಬಣ್ಣಗಳಲ್ಲಿ ಕೊಳ್ಳುಗರಿಗೆ ಸಿಗಲಿದೆ ಎನ್ನುವ ಮಾಹಿತಿ ಇನ್ನೂ ಬಯಲಾಗಿಲ್ಲ. ಆದರೂ ಬಿಳಿ, ಕಪ್ಪು, ನೀಲಿ, ಬೆಳ್ಳಿ ಹಾಗೂ ಕಂದು ಬಣ್ಣಗಳಲ್ಲಿ ಅಸ್ಪಾಯರ್ ಸಿಗುವ ಸಾದ್ಯತೆ ಹೆಚ್ಚೆಂದು ಹೇಳಬಹುದು.

ಪೋರ್ಡ್ ಕೂಟದವರು ಕಾರುಗಳ ಬೆಲೆ ಇನ್ನೂ ಹೊರಹಾಕದಿದ್ದರೂ, ತನ್ನ ಪಯ್ಪೋಟಿ ಕಾರುಗಳಿಗಿಂತ ಚೂರು ಹೆಚ್ಚು ಕಮ್ಮಿ ಇರಬಹುದು ಎಂದು ಕಯ್ಗಾರಿಕೆಯ ಪಂಡಿತರ ಅನಿಸಿಕೆ. ಹಲವರು ಹೇಳಿರುವಂತೆ ಪೆಟ್ರೋಲ್ ಮಾದರಿ ರೂ. 5 ಲಕ್ಶ ಮತ್ತು ಡೀಸೆಲ್ ಮಾದರಿ ರೂ.6.25 ಲಕ್ಶಗಳಿಂದ ಶುರುವಾಗಲಿದೆ. ಪೆಟ್ರೋಲ್ ಮಾದರಿಯ ಕಾರನ್ನು ರಸ್ತೆಗಿಳಿಸಿದಾಗ ತಗಲುವ ಬೆಲೆ (On Road Price) 6.5 ರಿಂದ 8 ಲಕ್ಶ ಆಗಬಹುದು. ಹೊಸದಾಗಿ ಕಾರುಕೊಳ್ಳಬೇಕು ಎಂದು ಮನಸು ಮಾಡಿರುವವರು ಪಿಗೊ ಅಸ್ಪಾಯರ್ ನತ್ತ ಕೂಡ ಕಣ್ಣುಹಾಯಿಸಬಹುದು.

*(ಮಾಹಿತಿ ಮತ್ತು ತಿಟ್ಟಸೆಲೆಗಳು: http://www.india.ford.com/cars/figoaspire )*

# ಮಯ್ಲಿಯೋಟದ ಮುಂದಾಳು - ಡೀಸೆಲ್ ಸೆಲೆರಿಯೊ

**24.06.2015**




ವರುಶದ ಹಿಂದೆ ಬಿಡುಗಡೆಗೊಂಡು ಜನರ ಮೆಚ್ಚುಗೆ ಪಡೆದಿದ್ದ ಮಾರುತಿ ಸುಜುಕಿರವರ ಸೆಲೆರಿಯೊ ಇದೀಗ ಡೀಸೆಲ್ ಬಿಣಿಗೆಯೊಂದಿಗೆ (engine) ಹೊರಬಂದಿದೆ. ಮಾರುತಿ ಸುಜುಕಿ ಕೂಟದವರು ಕೆಲ ದಿನಗಳ ಹಿಂದೆ ಈ ಬಂಡಿಯನ್ನು ಬೀದಿಗಿಳಿಸಿದ್ದಾರೆ. ಬಾರತದ ಮಾರುಕಟ್ಟೆಗೆ ಸುಜುಕಿ ಕೂಟದವರ ಎರಡನೇ ಡೀಸೆಲ್ ಬಿಣಿಗೆ ಇದಾಗಿದ್ದು ಮಾರುಕಟ್ಟೆಯಲ್ಲಿ ದೊಡ್ಡ ಸುದ್ದಿ ಮಾಡುತ್ತಿದೆ. ಇಲ್ಲಿಯವರೆಗೆ ಸುಜುಕಿ ಕೂಟ ಬಾರತದಲ್ಲಿ 1.3 ಲೀಟರ್ ಅಳತೆಯ ಒಂದೇ ಡೀಸೆಲ್ ಬಿಣಿಗೆಯನ್ನು ಅಣಿಗೊಳಿಸಿತ್ತು, ಇದೇ ಬಿಣಿಗೆ ಬಹುತೇಕ ಎಲ್ಲ ಸುಜುಕಿ ಡೀಸೆಲ್ ಬಂಡಿಗಳಲ್ಲಿ ಇರುತ್ತಿತ್ತು. ಆದರೆ ಈ ಬಾರಿ ಹೊಸ ಬಿಣಿಗೆಯೊಂದನ್ನು ಬಾರತದಲ್ಲಿ ಬೆಳವಣಿಗೆ ಮಾಡುವ ಆಸೆ ಹೊಂದಿದ್ದ ಸುಜುಕಿಯವರು ಅದನ್ನು ಕನಸಾಗಿಸಿದ್ದಾರೆ.




ಕಾರು ಬಂಡಿಗೆಂದೇ ಅಣಿಗೊಳಿಸಿದ ಬಾರತದ ಬಲು ಚಿಕ್ಕ ಡೀಸೆಲ್ ಬಿಣಿಗೆ ಇದು. ಕೇವಲ 2 ಉರುಳೆ (cylinder) ಹೊಂದಿರುವ ಈ ಬಿಣಿಗೆ 0.8 ಲೀಟರ್ ಅಳತೆಯದ್ದಾಗಿದೆ. ಇಶ್ಟೇ ಅಲ್ಲದೇ ಈ ಬಿಣಿಗೆ ಬಾರತದಲ್ಲಿರುವ ಎಲ್ಲ ಕಾರುಗಳಿಗಿಂತ ಹೆಚ್ಚಿನ ಮಯ್ಲಿಯೋಟ (mileage) ನೀಡಲಿದೆ. ಪ್ರತಿ ಲೀಟರ್ ಡೀಸೆಲ್ ಗೆ 27.62 ಕಿ.ಮೀ.. ಸಾಗಲಿದೆ ಹೊಸ ಡೀಸೆಲ್ ಸೆಲೆರಿಯೊ. ಕೆಲ ವರುಶಗಳ ಹಿಂದೆ ಹೊಂಡಾ ಕೂಟದವರಿಂದ ಬಿಡುಗಡೆಗೊಂಡಿದ್ದ ಅಮೇಜ್ ಬಂಡಿ ಪ್ರತಿ ಲೀಟರ್ ಡೀಸೆಲ್ ಗೆ 25 ಕಿ.ಮೀ.. ಮಯ್ಲಿಯೋಟ ನೀಡುವ ಮೂಲಕ ಮೊದಲ ಸ್ತಾನದಲ್ಲಿತ್ತು. ಇದನ್ನು ಹಿಂದಿಕ್ಕುವ ಮೂಲಕ ಸೆಲೆರಿಯೊ ಡೀಸೆಲ್ ಮಂದಿಯ ಮನಸೆಳೆಯುತ್ತಿದೆ.

ಅಗ್ಗದ ಬೆಲೆಯ ಕೊಳ್ಳುಗರ ಮನಸ್ತಿತಿಯನ್ನು ಅರಿತ ಮಾರುತಿ ಸುಜುಕಿ ಕೂಟ ಈ ನಿಟ್ಟಿನಲ್ಲಿ ಬಂಡಿಯ 97% ರಶ್ಟು ಬಿಡಿಬಾಗಗಳನ್ನು ಬಾರತದಲ್ಲಿ ಅಣಿಗೊಳಿಸಿದೆ. ಬಂಡಿಯನ್ನು 4 ರಿಂದ 5 ಲಕ್ಶ ಕಿ.ಮೀ..ಗಳವರೆಗೆ ಬಾರತದ ಬಗೆ ಬಗೆಯ ಬೀದಿಗಳಲ್ಲಿ

ಹೆದ್ದಾರಿಗಳಲ್ಲಿ ಓಡಾಡಿಸಿ ಒರೆಗೆ ಹೆಚ್ಚಲಾಗಿದೆ ಎಂದು ಕೂಟದವರು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ.

ಬಂಡಿಯ ಒಳಮಯ್ ಹಾಗೂ ಹೊರಮಯ್ ಗಳಲ್ಲಿ ಯಾವುದೇ ಹೆಚ್ಚಿನ ಬೇರ್ಮೆ ಮಾಡಲಾಕೊಳ್ಳದೇ ಪೆಟ್ರೋಲ್ ಸೆಲೆರಿಯೊ ಮಯ್ಮಾಟವನ್ನೇ ಉಳಿಸಿಕೊಳ್ಳಲಾಗಿದೆ. ಕಿರು ಕಾರುಗಳಲ್ಲಿ ಈಗಾಗಲೇ ಕಿಕ್ಕಿರಿದು ತುಂಬಿರುವ ಕಾರುಗಳ ಸಾಲಿಗೆ ಮತ್ತೊಂದು ಆಯ್ಕೆ ಬಂದಿದ್ದು ಕೊಳ್ಳುಗರಿಗೆ ಗೊಂದಲ ಇನ್ನೂ ಹೆಚ್ಚಲಿದೆ. ಹೆಚ್ಚಿನ ಮಯ್ಲಿಯೋಟದ ಕಾರು ಎಂಬ ಹಣೆಪಟ್ಟಿಯನ್ನೇ ಇದರ ಮಾರಾಟ ತಂತ್ರವನ್ನಾಗಿಸಲಾಗಿದೆ. ಆದರೂ ಕೆಲವರು ಬಿಣಿಗೆಯ ಕಸುವು ಮತ್ತು ತಿರುಗುಬಲ ಅಶ್ಚಕಶ್ಚೇ ಎಂದು ಮೂಗು ಮುರಿದು ಕೊಳ್ಳುತ್ತಿದ್ದಾರೆ.  ಹೊಸ ಡೀಸೆಲ್ ಸೆಲೆರಿಯೊ ಮಾರುತಿ ಸುಜುಕಿಯವರಿಗೆ ಲಾಬ ತಂದು ಕೊಡಲಿದೆಯೇ ಇದಕ್ಕೆ ಕಾರು ತಯಾರಕರು ಕಾದು ನೋಡಬೇಕು.

ಬಂಡಿಯ ವಿಶೇಶಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ವಿವರಿಸಲಾಗಿದೆ.




*(ಮಾಹಿತಿ ಮತ್ತು ತಿಟ್ಟ ಸೆಲೆ: www.marutisuzuki.com)*

# ಬಂದಿದೆ ಹೊಸದೊಂದು ಬಗೆಯ ಬಂಡಿ!

**06.07.2015**





ದಿನೇ ದಿನೇ ಹೊಸ ಬಗೆಯ ಕಾರುಗಳು, ಬಂಡಿಗಳು ಮಾರುಕಟ್ಟೆಗೆ ಬರುತ್ತಲಿವೆ. ಇವುಗಳಲ್ಲಿ ಹೆಚ್ಚಿನವು ಸಾಮಾನ್ಯ ಮಂದಿ ಸಾಗುವ ಹಲವು ಗಾತ್ರದ ಕಾರುಗಳು ಇಲ್ಲವೇ ಸರಕು ಸಾಗಿಸುವ ಬಂಡಿಗಳು. ಬಂಡಿಯೊಂದು ಸರಕು ಮತ್ತು ಮಂದಿ ಸಾಗಿಸುವ ಎರಡು ವಿಶೇಶತೆ ಹೊಂದಿದ್ದರೆ ಎಷ್ಟೊಂದು ಅನುಕೂಲ ಅಲ್ಲವೇ. ಇದೀಗ ಹೊಸದೊಂದು ಬಗೆಯ ಬಂಡಿಯೊಂದು ಮಾರುಕಟ್ಟೆಗೆ ಅಪ್ಪಳಿಸಿದೆ. ಇವೆರಡು ವಿಶೇಶತೆಯಲ್ಲದೇ ನಿಮ್ಮ ಮನೆಯನ್ನು ಬೆಳಗಬಲ್ಲದು, ನಿಮ್ಮ ಹೊಲಗದ್ದೆಗೆ ನೀರುಣಿಸಲೂಬಲ್ಲುದು. ಈ ಬಂಡಿಯ ಹೆಸರೇ **ಮಲ್ಟಿಕ್ಸ್ (Multix).**

ರಾಯಲ್ ಎನ್‌ಪೀಲ್ಡ್ (Royal Enfield) ಹೆಸರಿನಡಿ ಪಟಪಟ ಸದ್ದು ಮಾಡುವ ಇಗ್ಗಾಲಿ ಬಂಡಿಗಳು, ಟ್ರ್ಯಾಕ್ಟರ್‌ಗಳು ಮತ್ತು ವಿವಿದ ಗಾತ್ರದ ಲಾರಿ, ಬಸ್‌ಗಳನ್ನು ತಯಾರಿಸುವ ಬಾರತದ ಹೆಸರುವಾಸಿ ತಾನೋಡ ಕೂಟ **ಆಯ್ಕರ್ (Eicher).** ಆಯ್ಕರ್ ವೋಲ್ವೊ ಸಂಸ್ತೆಯೊಂದಿಗೆ ಸೇರಿ ಲಾರಿ-ಬಸ್ ತಯಾರಿಸುವ ಬೇರೆ ಕೂಟವನ್ನು ಕೂಡ ನಡೆಸುತ್ತಿದೆ. **ಪೋಲಾರಿಸ್** (Polaris) ಎಂಬುದು ಮರಳುಗಾಡು ಮತ್ತು ಗುಡ್ಡಗಾಡುಗಳಲ್ಲಿ ಓಡಾಡುವ ಬಂಡಿ ತಯಾರಿಸುವ ಜಗತ್ತಿನ ದೊಡ್ಡ ಕೂಟ. ಬಾರತ ಮೂಲದ ಆಯ್ಕರ್ ಮತ್ತು ಅಮೇರಿಕಾ ಮೂಲದ ಪೋಲಾರಿಸ್ ಈ ಎರಡು ಕೂಟಗಳು ಸೇರಿ ಹೊರತಂದಿರುವ ಬಂಡಿಯೇ ಮಲ್ಟಿಕ್ಸ್.



ಮಲ್ಟಿಕ್ಸ್ ಬಂಡಿ ಅತ್ತ ಮಂದಿ ಸಾಗಣೆ ಬಂಡಿಯೂ ಅಲ್ಲ ಇತ್ತ ಸರಕು ಸಾಗಣೆಯ ಬಂಡಿಯೂ ಅಲ್ಲ. ಇವೆರಡರ ಸರಿಯಾದ ಬೆರಕೆಯಿಂದಾದ ಬಂಡಿ ಎನ್ನಬಹುದು. ಬರೀ ಇಶ್ಟೇ ಅಲ್ಲದೇ ಈ ಬಂಡಿಯ ಹಿಂಬಾಗದಲ್ಲಿ ಮೂರು ಕಿಲೋವ್ಯಾಟ್ ಮಿಂಚು ತಯಾರಿಸುವ ಮಿಂಚುಟ್ಟುಕವೊಂದನ್ನು (Generator) ನೀಡಲಾಗಿದೆ. ಇದರ ಮೂಲಕ ನೀವು ನಿಮ್ಮ ಮನೆಯ ದೀಪ ಬೆಳಗಬಹುದು, ಹೊಲಗದ್ದೆಯಲ್ಲಿ ನೀರಿನೊತ್ತುಕಗಳಿಗೆ (water pump set) ಮಿಂಚು ನೀಡಿ ನೀರುಣಿಸಬಹುದು, ಬೂಮಿಯಾಳಕೆ ಚಿಕ್ಕ ಕೊಳವೆ ಬಾವಿ ಕೊರೆಯಲು ಬಳಸಬಹುದು.




ಕೇವಲ ಸಾಗಣೆಯ ಬಂಡಿಯಶ್ಟೇ ಅಲ್ಲದೇ ಹೀಗೆ ಹತ್ತು ಹಲವು ಕೆಲಸಗಳಿಗೆ ಈ ಬಂಡಿಯ ಬಳಕೆ ಮಾಡಬಹುದಾದುರಿಂದ ಇದಕ್ಕೆ ಸ್ವತಂತ್ರ ಮಂದಿಯ ಬಳಕೆಯ ಬಂಡಿ ಎಂಬ ಹೆಸರು ನೀಡಲಾಗಿದೆ. ಸ್ವತಂತ್ರವಾಗಿ ಸಣ್ಣ ಪುಟ್ಟ ವಹಿವಾಟು ನಡೆಸುವವರು, ಸಣ್ಣ ಮತ್ತು ಗುಡಿ ಕಯ್ಗಾರಿಕೆ ನಡೆಸುವವರ ಅಗತ್ಯಗಳಿಗೆ ತಕ್ಕಂತೆ ಈ ಬಂಡಿ ತಯಾರಿಸಲಾಗಿದೆ ಎಂದು ಆಯ್ಶರ್ ಪೋಲಾರಿಸ್ ಜಂಟಿ ಕೂಟದ ಮೇಲಾಳುಗಳಲ್ಲೊಬ್ಬರಾದ ಸಿದ್ದಾರ್ತ್ ಲಾಲ್ ಹೇಳಿಕೊಂಡಿದ್ದಾರೆ. ಸಿದ್ದಾರ್ತ್ ಲಾಲ್ ಹೇಳುವಂತೆ ಇಂಡಿಯಾದಲ್ಲಿ ಸುಮಾರು 5.8 ಕೋಟಿಯಶ್ಟು ಸ್ವತಂತ್ರ ಜಂಬರ(Business) ನಡೆಸಿಕೊಂಡು ಹೋಗುವವರಿದ್ದಾರೆ. ಇಂತವರ ಅಗತ್ಯಗಳಿಗೆ ತಕ್ಕ ಬಂಡಿಗಳ ಕೊರತೆಯಿದ್ದು ಇದೇ ನಿಟ್ಟಿನಲ್ಲಿ ಕೆಲಸ ಮಾಡಿ ಈ ಬವಣೆ ನೀಗಿಸಲು ಮಲ್ಟಿಕ್ಸ್ ಬಂಡಿ ಹೊರತರಲಾಗಿದೆ ಎಂದು ಶ್ರೀ ಲಾಲ್ ವಿವರಿಸಿದ್ದಾರೆ.

ಇದು ರಯ್ತಾಪಿ ಜನತೆಗೆ ಹೆಚ್ಚು ಅನುಕೂಲವಾಗಲಿದೆ ಎಂದು ಹಲವರ ಅನಿಸಿಕೆ. ತಾವು ಗದ್ದೆಯಲ್ಲಿ ಬೆಳೆದ ಇಳುವರಿಯನ್ನು ಮಾರುಕಟ್ಟೆಗೆ ಸಾಗಿಸಲು, ಮಿಂಚು ಇಲ್ಲದಾಗ ಗದ್ದೆಗೆ ನೀರುಣಿಸಲು ಇದರ ಮಿಂಚುಟ್ಟುಕ ಬಳಸಲು, ಪ್ರತಿದಿನ ಹೊಲಗದ್ದೆಗೆ ಬೇಟಿ ನೀಡಲು ಮತ್ತು ತಮ್ಮ ಕುಟುಂಬದವರ ಜೊತೆ ಸುತ್ತಾಡಲೂ ಈ ಮಲ್ಟಿಕ್ಸ್ ಒಂದಿದ್ದರೆ ಸಾಕು. ಈ ವಿಶೇಶತೆಯಿಂದ ಹಲವು ಮಂದಿಯನ್ನು ಈ ಬಂಡಿ ತನ್ನತ್ತ ಸೆಳೆಯುತ್ತಿದ್ದು, ಇದೇ ಬಗೆಯ ಸರಕು ಮತ್ತು ಮಂದಿ ಸಾಗಣೆ ಬಂಡಿ ತಯಾರಿಸಿ ಮುಂಚೂಣಿಯಲ್ಲಿರುವ ಟಾಟಾ(TATA), ಮಹೀಂದ್ರಾ(Mahindra) ಮತ್ತು ಪಿಯಾಜಿಯೊ(Piaggio) ಮುಂತಾದ ಕೂಟಗಳು ಇದೀಗ ಚಿಂತೆಗೀಡಾಗಿವೆ.

**ಸರಕು, ಮಂದಿ ಸಾಗಣೆ ಹಾಗೂ ಮಿಂಚು ತಯಾರಿಸಲು ಎಲ್ಲ ರೀತಿಯ ನೆರವು ನೀಡುವ ಬಂಡಿ**



ಇಗ್ಗಾಲಿ ಬಂಡಿ ನಡೆಸಿಕೊಂಡು ಹೋಗುವ ಬೆಲೆಯಲ್ಲೇ ಇದನ್ನು ನಡೆಸಿಕೊಂಡು ಹೋಗಬಹುದು ಎಂಬುದು ಬಂಡಿ ತಯಾರಕರ ವಾದ. ಲೀಟರ್ ಒಂದಕ್ಕೆ 28.45 ಕಿ.ಮೀ.. ಸಾಗುವ ಮಲ್ಟಿಕ್ಸ್‌ನ ಮಯ್ಲಿಯೋಟ ಈ ವಾದಕ್ಕೆ ಬಲ ತುಂಬಿದೆ. ಎಯಕ್ಸ್ ಪ್ಲಸ್(AX+) ಮತ್ತು ಎಮ್‌ಎಕ್ಸ್(MX) ಎಂಬ ಎರಡು ಬಗೆಯ ಮಾದರಿಯಲ್ಲಿ ಮಲ್ಟಿಕ್ಸ್ ಸಿಗಲಿದೆ. ಬೆಲೆ ರೂ.2.32 ರಿಂದ 2.72 ಲಕ್ಶಗಳಾಗಿರಲಿವೆ. ಎಯಕ್ಸ್‌ಪ್ಲಸ್ ಬಾಗಿಲು ಹೊಂದಿರದೆ ತೆರದ ಬಂಡಿಯಂತಿದೆ, ಎಮ್‌ಎಕ್ಸ್ ಮಾದರಿಯಲ್ಲಿ ಬಾಗಿಲು ನೀಡಲಾಗಿದೆ. ಎರಡು ಬಂಡಿಯ ತೂಕ ಕ್ರಮವಾಗಿ 650, 750 ಕೆಜಿಗಳು. ಇದಿಶ್ಟು ಬಿಟ್ಟರೆ ಎರಡು ಮಾದರಿಗಳಲ್ಲಿ ಯಾವುದೇ ಬೇರ್ಮೆಯಿಲ್ಲ.

ಬಂಡಿಯಲ್ಲಿ 5 ಮಂದಿ ಕೂಡಲು ಜಾಗವಿದೆ. ಒಂದಿಬ್ಬರು ಓಡಾಡುವಾಗ ಹೆಚ್ಚಿನ ಸರಕು ಸಾಗಿಸಲು ಅನುವಾಗುವಂತೆ ಹಿಂದಿನ ಕೂರುವ ಜಾಗವನ್ನು ಮಡಚಿ ಹೆಚ್ಚು ಸರಕು ತುಂಬುವ ಅವಕಾಶವಿದೆ. ಹಿಂಬಾಗದಲ್ಲಿ ಕವರ್ ಸೇರಿಸಿದರೆ ಸರಕು ಚಾಚಿಕೆಯ ಬಾಗ 418 ಲೀಟರ್ ನಿಂದ 840 ಲೀಟರ್‌ನಶ್ಟು ದೊಡ್ಡದಾಗಲಿದೆ. ಎಯಕ್ಸ್‌ಪ್ಲಸ್ ಕಡುಗೆಂಪು ಮತ್ತು ಬಿಳಿ ಬಣ್ಣಗಳಲ್ಲಿ ಮಾತ್ರ ಸಿಗಲಿದೆ. ಎಮ್‌ಎಕ್ಸ್ ಮಾದರಿ ಬಿಳಿ, ಕಡುಗೆಂಪು, ಹಳದಿ ಮತ್ತು ಬೆಳ್ಳಿ ಬಣ್ಣ ಸೇರಿದಂತೆ ಒಟ್ಟು 4 ಬಣ್ಣಗಳಲ್ಲಿ ಬರಲಿದೆ. ಕೆಳಗಿನ ಹೋಲಿಕೆ ಪಟ್ಟಿಯನ್ನು ನೋಡಿ ಎರಡು ಮಾದರಿಗಳ ನಡುವಣ ಬೇರ್ಮೆಯನ್ನು ತಿಳಿಯಬಹುದು.

| ಮಲ್ಟಿಕ್ಸ್ | ಎಯಕ್ಸ್ ಪ್ಲಸ್ | ಎಮ್‌ಎಕ್ಸ್ |
|---|---|---|
| ಸರಕು ಚಾಚಿಕೆ (Boot space) | 418.3 ಲೀಟರ್ | 418.3 (840) ಲೀಟರ್ |
| ಉರುವಲು ಚೀಲ (Fuel) | 11.5 ಲೀಟರ್ | 11.5 ಲೀಟರ್ |
| ತಡೆತ (Brake) | ತಮಟೆ ತರಹದ್ದು (drum) | |
| ಕೂರುವ ಜಾಗ | 5 | 5 |

ಪಿಎಸ್ ಕೂಡ ಕಸುವಿನ ಅಳತೆಗೋಲು. ಒಂದು ಪಿ.ಎಸ್ 0.98 ಹೆಚ್.ಪಿ ಗೆ ಸಮ

*ಓ.ಹಿ.-ಓಡಿಸುಗನ ಹಿಡಿತದ್ದು, ತ.ಹಿ.-ತನ್ನಿಡಿತದ್ದು

ಈ ಬಂಡಿಯಲ್ಲಿ ಗ್ರೀವ್ಸ್(Greaves) ಕೂಟದವರು ತಯಾರಿಸಿದ ಬಿಣಿಗೆ ಅಳವಡಿಸಲಾಗಿದೆ. 0.51 ಲೀಟರ್ ಅಳತೆಯ ಈ ಬಿಣಿಗೆ ಕೇವಲ ಒಂದು ಉರುಳೆಯನ್ನು ಮಾತ್ರ ಹೊಂದಿದೆ. ಹತ್ತು ಕುದುರೆಬಲದ ಬಿಣಿಗೆ (horse power engine), 27 ನ್ಯೂಟನ್ ಮೀಟರ್ ತಿರುಗುಬಲ (torque) ನೀಡಲಿದೆ. ಬಿಣಿಗೆಯ ಕೆಡುಗಾಳಿ ಬಿ.ಎಸ್-3 ಮಟ್ಟಕ್ಕೆ ಸರಿ ಹೊಂದುತ್ತದೆ. ಮಲ್ಟಿಕ್ಸ್‌ನಲ್ಲಿ 5 ವೇಗದ ಓಡಿಸುಗನಿಡಿತದ ಸಾಗಣಿಯಿರುತ್ತದೆ (transmission). ಮಲ್ಟಿಕ್ಸ್‌ನ ಬಿಣಿಗೆಯ ಗಾಲಿತೂಕದ ಬದಿಗೆ ಒಂದು ಗುಣಿ (shaft) ನೀಡಲಾಗಿದ್ದು ಬಿಣಿಗೆಯಿಂದ ಬರುವ ಕಸುವನ್ನು ಗುಣಿ ಮೂಲಕ ಮಿಂಚುಟ್ಟುಕಕ್ಕೆ (electric generator) ನೀಡಿ ಮಿಂಚು ತಯಾರಿಸಬಹುದಾಗಿದೆ. ಈ ಗುಣಿಗೆ ಎಕ್ಸ್‌ಪೋರ್ಟ್ ಶಾಪ್ಟ್ (X-Port Shaft) ಎಂಬ ಹೆಸರಿನಿಂದ ಕರೆಯಲಾಗುತ್ತಿದೆ.

ಈ ಬಂಡಿಗೆಂದೇ ಆಯ್ಶರ್-ಪೋಲಾರಿಸ್ ಕೂಟಗಳು ಪಾಲುದಾರಿಕೆಯಲ್ಲಿ ರಾಜಸ್ತಾನದ ಜಯ್ಪುರ್ ಬಳಿ 350 ಕೋಟಿ ರೂಪಾಯಿಗಳ ಹೂಡಿ ಕಾರ್ಕಾನೆಯೊಂದನ್ನು ಸ್ತಾಪಿಸಿವೆ. ಈ ಕಾರ್ಕಾನೆಯಿಂದ ವರುಶವೊಂದಕ್ಕೆ ಸುಮಾರು 60,000 ಬಂಡಿಗಳು ಹೊರಬರಲಿವೆಯಂತೆ. ಇದೀಗ ಇಂಡಿಯಾದ 8 ನಾಡುಗಳಲ್ಲಿ ಈಗಾಗಲೇ 30 ಮಾರಾಳಿಗರನ್ನು ನೇಮಿಸಿ ಮಲ್ಟಿಕ್ಸ್‌ನ ಮುಂಗಡ ಕಾಯ್ದಿರಿಸುವಿಕೆ ಚುರುಕುಗೊಂಡಿದೆ. ಆಗಸ್ಟ್‌ನಿಂದ ಈ ಬಂಡಿಗಳು ಕೊಳ್ಳುಗರ ಮನೆ ಸೇರಲಿವೆ ಎಂಬ ಸುದ್ದಿ ತಿಳಿದು ಬಂದಿದೆ. ಕರ್ನಾಟಕದಲ್ಲಿ ಈ ಬಂಡಿ ಮಾರಾಟ ಇನ್ನೂ ಶುರುವಾಗಿಲ್ಲ. ಬರುವ ದಿನಗಳಲ್ಲಿ ನಮ್ಮ ಕರ್ನಾಟಕ ಸೇರಿದಂತೆ ಇಂಡಿಯಾದ ಇತರೆ ನಾಡುಗಳಲ್ಲಿ ಬಂಡಿ ಮಾರಾಳಿಗರನ್ನು ನೇಮಿಸಲಾಗುವುದೆಂದು ಮಲ್ಟಿಕ್ಸ್ ಕೂಟ ತಿಳಿಸಿದೆ. ಬಂಡಿ ಕೊಳ್ಳಲು ಆಸಕ್ತಿಯಿದ್ದವರು ಕೂಟದ www.multix.in ಮಿಂದಾಣಕ್ಕೆ ಬೇಟಿ ನೀಡಬಹುದು.

| ಮಲ್ಟಿಕ್ಸ್ | ಎಯಕ್ಸ್ ಪ್ಲಸ್ | ಎಮ್ಎಕ್ಸ್ |
|---|---|---|
| ಬಿಣಿಗೆ (engine) | ಒಂದುರುಳೆಯ ಡಿಸೇಲ್ ಬಿಣಿಗೆ | |
| ಕಸು (power) | 9.92 ಪಿಎಸ್ | 9.92ಪಿಎಸ್ |
| ಬಿಣಿಗೆ ಅಳತೆ (cubic capacity) | 0.51 ಲೀಟರ್ | 0.51 ಲೀಟರ್ |
| ತಿರುಗುಬಲ (torque) | 27.1 | 27.1 |
| ಸಾಗಣಿ (transmission) | 5-ವೇಗದ ಓ.ಹಿ.* | 5-ವೇಗದ ಓ.ಹಿ. |
| ಆಯಗಳು (ಮಿಮೀ.ಗಳಲ್ಲಿ) Dimensions | | |
| ಗಾಲಿಗಳ ನಡುವಿರುವ ದೂರ (wheel base) | 2005 | 2005 |
| ಒಟ್ಟು ಉದ್ದ (length) | 3235 | 3235 |
| ಒಟ್ಟು ಅಗಲ (width) | 1585 | 1585 |
| ಬಂಡಿಯ ಎತ್ತರ (height) | 1856 | 1856 |
| ನೆಲತೆರವು (ground clearance) | 225 | 225 |
| ಬಂಡಿಯ ತಿರುಗರೆ(turn radius) | 3930 | 3930 |
| ತೂಕ (ಕೆಜಿಗಳಲ್ಲಿ) | | |
| ಬಂಡಿ ತೂಕ (kerb weight) | 650 | 750 |
| ಒಟ್ಟು ತೂಕ (gross weight) | 1150 | 1150 |

*(ಮಾಹಿತಿ ಮತ್ತು ತಿಟ್ಟ ಸೆಲೆಗಳು: www.multix.in)*

# ಇಂದು ಜಗಮಗಿಸಲಿದೆ ಹೊಂಡಾ ಜಾಜ್

**08.07.2015**



**ಜಾಜ್** (Jazz) ತಾನೋಡ ಉದ್ಯಮದಲ್ಲಿರುವ ಹೆಚ್ಚಿನವರು ಕೇಳಿರುವ ಹೆಸರು. ಹೊಂಡಾ ಕೂಟದವರು ಜಗತ್ತಿನೆಲ್ಲೆಡೆ ಬಿಡುಗಡೆ ಮಾಡಿದ ಜಾಜ್ ಕಾರು ಒಳ್ಳೆಯ ಹೆಸರುವಾಸಿ ಬಂಡಿಗಳಲ್ಲೊಂದು. 2009ರಲ್ಲಿ ಈ ಬಂಡಿ ಇಂಡಿಯಾದಲ್ಲಿ ಕೂಡ ಬೀದಿಗಿಳಿದಿತ್ತು. ಇಂಡಿಯಾದಲ್ಲಿ ಅಶ್ಟೇನು ಹೆಸರು ಮಾಡದ ಜಾಜ್ ದಿನದಿಂದ ದಿನಕ್ಕೆ ಬೇಡಿಕೆ ಕಳೆದುಕೊಳ್ಳತೊಡಗಿತ್ತು. ಕುಗ್ಗಿದ ಬೇಡಿಕೆಯಿಂದ ಬೇಸತ್ತ ಹೊಂಡಾ ಇಂಡಿಯಾ ಕೂಟದವರು 2013 ರಲ್ಲಿ ಜಾಜ್ ತಯಾರಿಕೆಯನ್ನು ನಿಲ್ಲಿಸಿದ್ದರು. ಆದರೆ ಇಲ್ಲಿಯವರೆಗೆ 55 ಲಕ್ಶ ಜಾಜ್ ಬಂಡಿಗಳನ್ನು ಜಗತ್ತಿನ 75 ದೇಶಗಳಲ್ಲಿ ಮಾರಾಟ ಮಾಡಿರುವ ಹೊಂಡಾದವರಿಗೆ ಇಂಡಿಯಾದಲ್ಲಿ ಸೋಲು ಅರಗಿಸಿಕೊಳ್ಳಲಾಗಲಿಲ್ಲ ಎನ್ನಿಸುತ್ತದೆ. ಅದಕ್ಕೆ ಚಲದಂಕ ಮಲ್ಲನಂತೆ ಮರಳಿ ಯತ್ನವ ಮಾಡುವಂತೆ ಹೊಂಡಾ ತನ್ನ ಹೊಸದಾಗಿಸಿದ ಜಾಜ್ ಕಾರನ್ನು ಇಂದಿನಿಂದ ಇಂಡಿಯಾದ ಮಾರುಕಟ್ಟೆಗೆ ತರುತ್ತಿದೆ.

ಹಳೆಯ ಜಾಜ್ ಇಂಡಿಯಾದಲ್ಲಿ ಸೋಲಲು ಅದರ ನೋಟ, ಮಯ್ಮಾಟ ಮತ್ತು ಹೆಚ್ಚಿನ ಬೆಲೆ ಇವುಗಳು ಕಾರಣವಾಗಿದ್ದವು. ಇವೆಲ್ಲದರ ಕಡೆ ಹೆಚ್ಚಿನ ಗಮನಹರಿಸಿ ಇದೀಗ ಹೊಸದಾದ ಜಾಜ್ ತಯಾರಿಸಲಾಗಿದೆ. ಎಶ್ಟೇ ಆಗಲಿ ಹೊಂಡಾ ಕೂಟದವರು ಸುಲಬವಾಗಿ ಸೋಲೊಪ್ಪಿಕೊಳ್ಳದ ಮಂದಿ. ಎರಡನೇ ವಿಶ್ವ ಕಾದಾಟದ ಸಮಯದಲ್ಲಿ ನಶ್ಟ ಅನುಬವಿಸಿ ಮೇಲೆದ್ದು ಮತ್ತೆ ಸಾಲು ಸಾಲಾಗಿ ನಶ್ಟದ ಸುಳಿಗೆ ಸಿಲುಕಿದರೂ ಪಿನಿಕ್ಸ್ ಹಕ್ಕಿಯಂತೆ ಮಯ್ಗೊಡವಿ ಎದ್ದು ನಿಂತ ಹೊಂಡಾ ಕೂಟದ ಹಳಮೆಯೇ ಇದಕ್ಕೆ ಹಿಡಿದ ಕನ್ನಡಿ. ಈ ಹೊಸ ಜಾಜ್ ಕಾರಿನತ್ತ ಒಂದು ಇಣುಕು ನೋಟ ನಿಮ್ಮ ಮುಂದಿಡುತ್ತಿದ್ದೇನೆ.

**ಬಿಣಿಗೆ (engine):**



ಬಿಣಿಗೆಯ ವಿಶಯಕ್ಕೆ ಬಂದರೆ ಹೊಸ ಜಾಜ್ ಎರಡು ಬಿಣಿಗೆಯ ಮಾದರಿಯಲ್ಲಿ ಬರಲಿದೆ. ಪೆಟ್ರೋಲ್ ಮಾದರಿಗಾಗಿ 1.2 ಲೀಟರ್ ಆಯ್ವಿಟೆಕ್ ಬಿಣಿಗೆಯನ್ನು ನೆಚ್ಚಿಕೊಂಡಿದೆ. ಡೀಸೆಲ್ ಮಾದರಿಯಲ್ಲಿ ಅಮೇಜ್, ಮೊಬಿಲಿಯೊಗಳಲ್ಲಿ ಮಿಂಚುತ್ತಿರುವ ಆಯ್ಡಿಟೆಕ್ ಬಿಣಿಗೆಯನ್ನು ಅಳವಡಿಸಲಾಗಿದೆ. ಪೆಟ್ರೋಲ್ ನ ಆಯ್ವಿಟೆಕ್ ಬಿಣಿಗೆ 89 ಕುದುರೆಬಲದ ಕಸುವು ನೀಡಿದರೆ, 110 ನ್ಯೂಟನ್ ಮೀಟರ್ ನಶ್ಚು ತಿರುಗುಬಲ ಉಂಟು ಮಾಡಲಿದೆ. 1.5 ಲೀಟರ್‌ನ ಆಯ್ಡಿಟೆಕ್ ಬಿಣಿಗೆ 99 ಕುದುರೆಬಲ ಹೊರಹಾಕಿದರೆ 200 ನ್ಯೂ.ಮೀ. ತಿರುಗುಬಲ ನೀಡಲಿದೆ. ಪ್ರತಿ ಲೀಟರ್ ಡೀಸೆಲ್‌ಗೆ 27.3 ಕಿ.ಮೀ.. ಸಾಗುವ ಆಯ್ಡಿಟೆಕ್ ಬಿಣಿಗೆ ಮಯ್ಲಿಯೋಟದಲ್ಲಿ ಇತ್ತಿಚೀಗೆ ಬಿಡುಗಡೆಗೊಂಡ ಸೆಲೆರಿಯೊ ಡೀಸೆಲ್ ಬಿಣಿಗೆಯ ನಂತರದ ಸ್ತಾನ ಪಡೆದಿದೆ. ಅದೇ ಪೆಟ್ರೋಲ್ ಬಿಣಿಗೆಯ ಮಯ್ಲಿಯೋಟ 19 ಕಿ.ಮೀ..ಗಳು.

**ಸಾಗಣಿ (transmission):**

ಜಾಜ್‌ನ ಡಿಸೇಲ್ ಮಾದರಿ 6-ವೇಗದ ಓಡಿಸುಗನಿಡಿತದ ಸಾಗಣಿ ಅಳವಡಿಸಿಕೊಂಡಿದೆ. ಪೆಟ್ರೋಲ್‌ನಲ್ಲಿ ಎರಡು ಸಾಗಣಿಯ ಆಯ್ಕೆಗಳಿವೆ. 5-ವೇಗದ ಓಡಿಸುಗನಿಡಿತದ ಸಾಗಣಿ ಮತ್ತು ಸಿವಿಟಿ(CVT) ಚಳಕದ ಇನ್ನೊಂದು ಸಾಗಣಿಯೂ ಪೆಟ್ರೋಲ್ ಮಾದರಿಗಳಲ್ಲಿ ಇರಲಿದೆ.

**ಮಯ್ಮಾಟ:**

ಹೊಸ ಜಾಜ್‌ನ ಮಯ್ಮಾಟ ಸಾಕಶ್ಟು ಬದಲಾವಣೆಗೊಂಡಿದೆ. ಈ ಮುಂಚಿನ ಜಾಜ್ ಗಿಂತ ಮನಸೆಳೆಯುವ ಮಯ್ಮಾಟ ಹೊಂದಿದೆ. ಓಡಿಸುಗ ಕೂಡಲು ಸಾಕಶ್ಟು ಜಾಗವಿದೆ. ಹಿಂಬಾಗದಲ್ಲಿ ಕೂರುವವರಿಗೆ ತಕ್ಕಮಟ್ಟಿಗೆ ಜಾಗವಿದ್ದರೂ ಮೂರು ಜನ ಹಾಯಾಗಿ ಕಾಲು ಚಾಚಿ ಕುಳಿತುಕೊಳ್ಳಲು ಸ್ವಲ್ಪ ತೊಂದರೆಯಾಗಲಿದೆ. ಕಾರಿನ ತೋರುಮಣೆಗೆ ಸೋಕುತೆರೆ (touch screen) ಏರ್‍ಪಾಟು ಒದಗಿಸಲಾಗಿದೆ.

ಹೊಸ ಜಾಜ್ ಗುಲಾಬಿ ಬೆರಕೆಯ ಕೆಂಪು, ಕೇಸರಿ, ನೀಲಿ ಮತ್ತು ಬಿಳಿ ಬಣ್ಣಗಳ ಆಯ್ಕೆಗಳಲ್ಲಿ ಸಿಗಲಿದೆ. ಇನ್ನೂ ಹೆಚ್ಚಿನ ಬಣ್ಣಗಳಲ್ಲೂ ಬರಬಹುದು ಎನ್ನುವ ಸುದ್ದಿಯಿದೆ.

**ಪಯ್ಪೋಟಿ:**

ಹನ್ನೊಂದು ತಿಂಗಳು ಹಳೆಯದಾದ ಹ್ಯುಂಡಾಯ್ ಎಲಾಯ್ಟ್ ಆಯ್20 (i20 Elite) ಬಂಡಿಗೆ ಹೊಸ ಜಾಜ್ ಸೆಡ್ದು ಹೊಡೆಯಲಿರುವುದು ಕಚಿತ ಎಂಬುದು ತಾನೋಡ ಉದ್ಯಮದಲ್ಲಿ ಕೇಳಿ ಬರುತ್ತಿದೆ. ಮಂದಿಯ ಅಗತ್ಯಕ್ಕೆ ತಕ್ಕಂತಿರುವ ಎಲಾಯ್ಟ್ ಆಯ್20 ಮಾರುಕಟ್ಟೆಯಲ್ಲಿ ಗೆಲುವಿನ ನಾಗಾಲೋಟ ಮುಂದುವರೆಸಿದೆ. ಇದಕ್ಕೆ ಕಡಿವಾಣ ಹಾಕುವ ಸಂಚಿನಲ್ಲಿದೆ ಹೊಂಡಾ ಜಾಜ್.

ಇವೆರಡು ಬಂಡಿಗಳನ್ನು ಹೋಲಿಕೆ ಮಾಡಿ ನೋಡಿದರೆ ಸಾಕಶ್ಟು ವಿಶಯಗಳಲ್ಲಿ ಬೇರ್‍ಮೆ ಕಂಡು ಬರುತ್ತದೆ. ಎಲಾಯ್ಟ್ ಆಯ್20 ಉದ್ದ, ಅಗಲ, ಗಾಲಿಗಳ ನಡುವಿನ ದೂರ ಮತ್ತು ನೆಲ ತೆರವು ಮುಂತಾದ ಆಯಗಳಲ್ಲಿ ಜಾಜ್ ಗಿಂತ ಸ್ವಲ್ಪ ಮುಂದಿದೆ. ಜಾಜ್ ಬಂಡಿಯು ಎತ್ತರ ಮತ್ತು ಸರಕು ಚಾಚಿಕೆಯಲ್ಲಿ ಎಲಾಯ್ಟ್ ಆಯ್20 ಯನ್ನು ಹಿಂದಿಕ್ಕುತ್ತದೆ.



ಹೊಸ ಜಾಜ್ ನಲ್ಲಿ ಸಾಕಶ್ಟು ಸರಕು ಚಾಚಿಕೆಯಿರುವುದರಿಂದ ನಿಮ್ಮ ಅಗತ್ಯಕ್ಕೆ ತಕ್ಕಂತೆ ಸರಕು ಸಾಗಿಸಬಹುದು

ಕಸುವಿನಲ್ಲಿ ಕೊಂಚ ಮುಂದಿರುವ ಜಾಜ್ ತಿರುಗುಬಲದಲ್ಲಿ (torque) ಚೂರು ಹಿಂದೆ ಬಿದ್ದಿದೆ. ಇನ್ನು ಮಯ್ಲಿಯೋಟದಲ್ಲಿ ಜಾಜ್‌ಗೆ ಸರಿಸಾಟಿ ಯಾರಿಲ್ಲವೆಂದೇ ಹೇಳಬಹುದು. ಲೀಟರ್ ಡೀಸೆಲ್‌ಗೆ 22.54 ಕಿ.ಮೀ.. ಸಾಗುವ ಹ್ಯುಂಡಾಯ್ ಆಯ್20 ಬಂಡಿಯು, 27.3 ಕಿ.ಮೀ.. ಓಡುವ ಜಾಜ್‌ನ ಮುಂದೆ ಮಂಡಿಯೂರುತ್ತದೆ.

ಹೊಸ ಜಾಜ್ ಕಾರಿನ ವಿಶೇಶಗಳು ಮತ್ತು ಹ್ಯುಂಡಾಯ್ ಎಲಾಯ್ಟ್ ಆಯ್20 ಯೊಂದಿಗೆ ಹೋಲಿಕೆಯನ್ನು ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ.

| ಬಂಡಿಯ ಮಾದರಿ | ಜಾಜ್ ಪೆಟ್ರೋಲ್ | ಆಯ್20 ಪೆಟ್ರೋಲ್ | ಜಾಜ್ ಡೀಸೆಲ್ | ಆಯ್20 ಡೀಸೆಲ್ |
|---|---|---|---|---|
| ಬಿಣಿಗೆ (engine) | ಆಯ್ವಿಟೆಕ್ (i-Vtec) | ಕಪ್ಪಾ (Kappa) | `ಆಯ್ಡಿಟೆಕ್ (i-Dtec) | ಸಿಆರ್ಡಿಆಯ್ (CRDI) |
| ಕಸು (power) | 89 | 82 | 99 | 89 |
| ಬಿಣಿಗೆ ಅಳತೆ (cubic capacity) | 1.2 ಲೀ | 1.2 ಲೀ | 1.5 ಲೀ | 1.4 ಲೀ |
| ತಿರುಗುಬಲ (torque) | 110 | 115 | 200 | 220 |
| ಮಯ್ಲಿಯೋಟ | 19/18.3 | - | 27.3 | 22.54 |
| ಗಾಲಿಗಳ ನಡುವಿರುವ ದೂರ (wheel base) | 2530 | 2570 | 2530 | 2570 |
| ಒಟ್ಟು ಉದ್ದ (length) | 3955 | 3985 | 3955 | 3985 |
| ಒಟ್ಟು ಅಗಲ (width) | 1694 | 1744 | 1694 | 1744 |
| ಬಂಡಿಯ ಎತ್ತರ (height) | 1544 | 1505 | 1544 | 1505 |
| ನೆಲತೆರವು (ground clearance) | 165 | 170 | 165 | 170 |
| ಸರಕು ಚಾಚಿಕೆ (Boot space) | 354 ಲೀ | 285 ಲೀ | 354 ಲೀ | 285 ಲೀ |

ಪಟ್ಟಿಯಲ್ಲಿರುವ ಅಯಗಳು ಮಿ.ಮೀ.ಗಳಲ್ಲಿ

**ಬೆಲೆ:**

ಜಾಜ್ ಕಾರಿನ ಬೆಲೆಯನ್ನು ಹೊಂಡಾ ಇನ್ನೂ ಹೊರಹಾಕಿಲ್ಲ. ಕೆಲವು ಮೂಲಗಳು ಹೇಳುವಂತೆ ಪೆಟ್ರೋಲ್ ಮಾದರಿ 5.5 ಯಿಂದ 7 ಲಕ್ಶ ರೂ.ಗಳಶ್ಟು ಮತ್ತು ಡಿಸೇಲ್ 6.5 ಯಿಂದ 8 ಲಕ್ಶಗಳಶ್ಟು ಇರಲಿದೆಯೆಂದು ತಿಳಿದು ಬಂದಿದೆ. ಹ್ಯುಂಡಾಯ್‌ಗೆ ಬಿರುಸಿನ ಪಯ್ಪೋಟಿ ನೀಡಲು ಹೊಂಡಾ ಕೂಟದವರು ಜಾಜ್ ಬಂಡಿಯ ಬೆಲೆಯನ್ನು ಎಲಾಯ್ಟ್ ಆಯ್20 ಗಿಂತ ಚೂರು ಕಡಿಮೆ ಮಾಡಬಹುದು ಎನ್ನಲಾಗುತ್ತಿದೆ. ಜಾಜ್ ಕೊಳ್ಳ ಬಯಸುವವರು 51,000 ರೂಪಾಯಿಗಳನ್ನು ನೀಡಿ ಮುಂಗಡ ಕಾಯ್ದಿರಿಸಬಹುದು.

*(ಮಾಹಿತಿ ಮತ್ತು ತಿಟ್ಟ ಸೆಲೆಗಳು: www.hondacarindia.com, www.autocarindia.com)*

# ಕಂಗೊಳಿಸಲಿದೆ ಹೊಸ ಹ್ಯುಂಡಾಯ್ ಕ್ರೇಟಾ

**21.07.2015**




ಇತ್ತೀಚಿನ ದಿನಗಳಲ್ಲಿ ಇಂಡಿಯಾದಲ್ಲಿ ಮೇಲಿಂದ ಮೇಲೆ ಹೊಸ ಬಂಡಿಗಳು ಬರುತ್ತಲೇ ಇವೆ. ಕೆಲವು ಸೆಲೆಗಳ ಪ್ರಕಾರ ಈ ವರುಶ ಸುಮಾರು 53 ವಿವಿದ ಬಗೆಯ ಬಂಡಿಗಳು ನಮ್ಮ ಇಂಡಿಯಾದಲ್ಲಿ ಹೊರಬರಲಿದ್ದು, ಇದೇ ಮೊದಲ ಬಾರಿಗೆ ಇಶ್ಟೊಂದು ಕಾರುಗಳು ಒಂದೇ ವರುಶದಲ್ಲಿ ಬರುತ್ತಿರುವುದು ದಾಕಲೆ ಎನ್ನಲಾಗಿದೆ. ಇಲ್ಲಿಯವರೆಗೆ ಒಟ್ಟು 13ಕ್ಕೂ ಹೆಚ್ಚು ಬಗೆ ಬಗೆಯ ಬಂಡಿಗಳು ಮಾರುಕಟ್ಟೆಗೆ ಅಪ್ಪಳಿಸಿವೆಯಂತೆ. ಬರಲಿರುವ ನಾಗರಪಂಚಮಿ, ಗವ್ರಿ-ಗಣೇಶ, ದಸರೆ ಮುಂತಾದ ಹಬ್ಬದ ದಿನಗಳಲ್ಲಿ ಸಾಲು ಸಾಲು ಕಾರುಗಳು ಬಿಡುಗಡೆಗೊಳ್ಳುವುದು ದಿಟಗೊಂಡಿದೆ. ತಾಮುಂದು ನಾಮುಂದು ಎಂದು ಟಾಟಾ, ಮಹೀಂದ್ರಾ, ಸುಜುಕಿ, ರೆನೋ, ಪೋರ್ಡ್ ಕೂಟದವರು ಸೇರಿದಂತೆ ಹಲವರು ಹೊಸ ಹೊಸ ಬಂಡಿಗಳನ್ನು ಸಿದ್ದಗೊಳಿಸಿ ಬೀದಿಗಿಳಿಸುವ ತರಾತುರಿಯಲ್ಲಿದ್ದಾರೆ. ಇನ್ನೂ ಕೆಲ ಕೂಟದವರು ತಮ್ಮ ಹಳೆಯ ಬಂಡಿಗಳಿಗೆ ಹೊಸ ಮೊಗ ತೊಡಿಸಿಯೋ ಇಲ್ಲವೇ ಒಳಮಯ್‍ಗಳಲ್ಲಿ ಕಿರು ಬದಲಾವಣೆ ಮಾಡಿ ತಮ್ಮ ಅದ್ರುಶ್ಟವನ್ನು ಒರೆಹಚ್ಚಲಿದ್ದಾರೆ.

**ಹ್ಯುಂಡಾಯ್(HYUNDAI)** ಇಂಡಿಯಾ ಎರಡನೇಯ ದೊಡ್ಡ ಬಂಡಿ ತಯಾರಕ ಕೂಟ. ಇಂಡಿಯಾದ ಕಾಲು ಬಾಗಕ್ಕಿಂತ ಹೆಚ್ಚಿನ ಮಾರುಕಟ್ಟೆಯನ್ನು ಹ್ಯುಂಡಾಯ್ ಹೊಂದಿದೆ. ಈ ಮುನ್ನಡೆ ಕಾಯ್ದುಕೊಳ್ಳಲು ಹ್ಯುಂಡಾಯ್ ಇಂದಿನಿಂದ ಹೊಸದಾದ **ಕ್ರೇಟಾ**(CRETA) ಎಂಬ ಬಂಡಿಯನ್ನು ಮಾರುಕಟ್ಟೆಗೆ ತರುತ್ತಿದೆ. 3 ವರುಶಗಳ ಹಿಂದೆ **ಡಸ್ಟರ್** (Duster) ಹೆಸರುಳ್ಳ ಬಂಡಿ ಮೂಲಕ ರೆನೋ ಕೂಟ ಇಂಡಿಯಾದ ಕೊಳ್ಳುಗರಲ್ಲಿ ಕಿರು ಆಟೋಟ ಬಂಡಿಗಳ (SUV) ಹುಚ್ಚನ್ನು ಎಬ್ಬಿಸಿತ್ತು. ಇದರ ಗೆಲುವಿನಿಂದ ಎದುರಾಳಿ **ಪೋರ್ಡ್**(Ford) ಕೂಟದವರು **ಎಕೊಸ್ಪೋರ್ಟ್ (Eco sport)** ತಯಾರಿಸಿ ತಮ್ಮ ಬಲವನ್ನು ತೋರಿಸಿದ್ದರು. ಇವೆರಡು ಕಾರುಗಳು ತಾನೋಡದ ಕಯ್ಗಾರಿಕೆಯಲ್ಲಿ ಸಾಕಶ್ಟು ಸದ್ದು ಮಾಡಿ ಗೆದ್ದು ಮುನ್ನಲೆಯಲ್ಲಿವೆ. ಹೆಚ್ಚಾಗಿ ಕಿರು ಕಾರುಗಳತ್ತಲೇ ಚಿತ್ತ ನೆಟ್ಟಿದ್ದ ಹ್ಯುಂಡಾಯ್ ಈಗ ಕ್ರೇಟಾ ಹೊರತರುವ ಮೂಲಕ ಇವರಿಗೆ ಸಡ್ಡು ಹೊಡೆಯಲು ಮುಂದಾಗಿದೆ.

ಯಾವುದೇ ಒಂದು ಬಂಡಿಯನ್ನು ತಯಾರಿಸಿ ಮಾರಾಟಕ್ಕೆ ಅಣಿಗೊಳಿಸಲು ಏನಿಲ್ಲವೆಂದರೂ ಸುಮಾರು 2-3 ವರುಶಗಳು ತಗಲುತ್ತವೆ. ಬಂಡಿ ಈಡುಗಾರಿಕೆ (Design), ಬಿಣಿಗೆಯನ್ನು ಅಣಿಗೊಳಿಸುವುದು, ಬಿಡಿಬಾಗ ತಯಾರಕರೊಂದಿಗೆ ಸೇರಿ ಬಂಡಿಯ ಎಲ್ಲ ಬಾಗಗಳನ್ನು ಸಜ್ಜುಗೊಳಿಸಿ ಕೊನೆಯಲ್ಲಿ ಸರಕಾರ ತೀರ್ಮಾನಿಸಿದ ಕೆಡುಗಾಳಿ ಮಟ್ಟಗಳಿಗೆ ಹೊಂದುವಂತೆ ವಿವಿದ ಒರೆಹಚ್ಚುವಿಕೆಯನ್ನು ಪೂರ್ಣಗೊಳಿಸಿ ಮಾರಾಟಕ್ಕೆ ಹೋಗುವುದು - ಈ ಎಲ್ಲ ಕೆಲಸಗಳು ಇದರಲ್ಲಿ ಸೇರಿವೆ. ಇದಕ್ಕೆಂದೇ ಕೊರಿಯಾದ ತನ್ನ ಪ್ರಮುಕ ಅರಕೆಮನೆಯಲ್ಲಿ ಹ್ಯುಂಡಾಯ್ ಕ್ರೇಟಾದ ಈಡುಗಾರಿಕೆ ಆರಂಬಿಸಿತ್ತು. ಹಯ್ದ್ರಾಬಾದ್‍ನಲ್ಲಿರುವ ಹ್ಯುಂಡಾಯ್ ಇಂಡಿಯಾದ ಬಿಣಿಗೆಯರಿಗರು ಇದರಲ್ಲಿ ಜೊತೆಗೂಡಿದ್ದರು. ಈ ಮುಂಚೆ ಸೆಪ್ಟೆಂಬರ್-ಅಕ್ಟೋಬರ್ ತಿಂಗಳಿನಲ್ಲಿ ಕ್ರೇಟಾ ಬೀದಿಗಿಳಿಸುವ ಯೋಚನೆ ಹೊಂದಿದ್ದ ಹ್ಯುಂಡಾಯ್ ತನ್ನ ನೇರ ಎದುರಾಳಿ ಮಾರುತಿ ಸುಜುಕಿ ಕೂಟ ಎಸ್-ಕ್ರಾಸ್ (S-Cross) ಬಂಡಿಯೊಂದನ್ನು ಹೊರತರುತ್ತಿರುವ ಹಿನ್ನಲೆಯಲ್ಲಿ, ಜುಲಾಯ್ ತಿಂಗಳೇ ತಕ್ಕದು ಎಂದು ನಿರ್ದಾರ ಮಾಡಿತು.

ಅದಕ್ಕೆ ಬೇಕಾದ ಎಲ್ಲ ತಯಾರಿಗಳನ್ನು ಮಾಡಿಕೊಂಡು ಜುಲಾಯ್ 21ರ ಮುಹೂರ್ತವನ್ನು ನಿಗದಿಪಡಿಸಿ ಸುದ್ದಿ ಮಾಧ್ಯಮಗಳಿಗೆ ತಿಳಿಸಿತು. ಬಿಡುಗಡೆಗೆ ಮುನ್ನವೇ ಎಲ್ಲೆಡೆ ಸದ್ದು ಮಾಡುತ್ತಿರುವ ಕ್ರೇಟಾ ಬಂಡಿಯ ಸುದ್ದಿ ಇದರಿಂದ ಇನ್ನೂ ಹೆಚ್ಚತೊಡಗಿದೆ.

ಒಂದು ತಿಂಗಳ ಹಿಂದೆಯೇ ಕ್ರೇಟಾಗೋಸ್ಕರವೇ ಮಿಂದಾಣವೂ ಕೂಡ ಆರಂಬಗೊಂಡಿದೆ. ಮಿಂದಾಣದಲ್ಲಿ ಮೊದಲು ಕ್ರೇಟಾದ ಕಯ್ತಿಟ್ಟವನ್ನು ಹಂಚಿಕೊಂಡು, ಕಳೆದೆರಡು ವಾರಗಳಲ್ಲಿ ಬಂಡಿಯ ವಿವಿದ ತಿಟ್ಟಗಳು ಮೂಡಿ ಬಂದಿವೆ. ಅದು ಅಲ್ಲದೇ ಕ್ರೇಟಾದ ಎಲ್ಲ ವಿಶೇಶತೆಗಳನ್ನು ಹ್ಯುಂಡಾಯ್ ಕೂಟ ಮಿಂದಾಣದ ಮೂಲಕ ಹೊರಹಾಕಿದೆ. ಟ್ವಿಟ್ಟರ್, ಪೇಸ್ಬುಕ್ ಮುಂತಾದ ಸಾಮಾಜಿಕ ತಾಣಗಳಲ್ಲೂ ಕ್ರೇಟಾ ಬಂಡಿಯ ಬಗ್ಗೆ ಬಿಸಿ, ಬಿಸಿ ಮಾತುಕತೆಗಳು ನಡೆಯುತ್ತಿವೆ. ಈಗಾಗಲೇ ಮುಂಗಡ ಕಾಯ್ದಿಸಿರುವಿಕೆ ಆರಂಬಿಸಿರುವ ಹ್ಯುಂಡಾಯ್ ಕ್ರೇಟಾದ ಬರಾಟೆ ಹೇಗಿದೆಯೆಂದರೆ 28,500 ಮಂದಿ ಹ್ಯುಂಡಾಯ್ ಮಳಿಗೆಗೆ ಬೇಟಿ ಇತ್ತು ಕ್ರೇಟಾದ ಬಗ್ಗೆ ವಿಚಾರಣೆ ನಡೆಸಿದರೆ, 10,000 ಮಂದಿ ಆಗಲೇ ರೂ.40/50 ಸಾವಿರ ಮುಂಗಡ ನೀಡಿ ತಮ್ಮ ಕೊಳ್ಳುವಿಕೆಯನ್ನು ಕಚಿತಪಡಿಸಿದ್ದಾರೆ. ಇಂಡಿಯಾದಲ್ಲಿ ಹ್ಯುಂಡಾಯ್ ಹೆಸರುವಾಸಿತನ ಎಶ್ಟಿದೆ ಎನ್ನಲು ಇದು ಕನ್ನಡಿ.

**ಕ್ರೇಟಾದ ಬಿಣಿಗೆ, ಸಾಗಣಿ, ಮಯ್ಮಾಟ, ಬೆಲೆ ಮತ್ತು ಇತರೆ ವಿಶೇಶಗಳು:**

**ಬಿಣಿಗೆ:**

ಇತ್ತಿಚೇನ ಎಲ್ಲ ಬಂಡಿ ತಯಾರಕರು ನೀಡುವಂತೆ ಕ್ರೇಟಾ ಕೂಡ ಡೀಸೆಲ್, ಪೆಟ್ರೋಲ್‌ನ ಎರಡೂ ಬಗೆಗಳಲ್ಲಿ ಬರುತ್ತಿದೆ. ಡೀಸೆಲ್‌ನಲ್ಲಿ 1.4, 1.6 ಲೀಟರ್ ಅಳತೆಯ 2 ಕಸುವುಗೂಡಿನ (Powertrain) ಆಯ್ಕೆಗಳು ಮತ್ತು ಪೆಟ್ರೋಲ್‌ನಲ್ಲಿ 1.6 ಲೀಟರ್‌ನ ಒಂದು ಕಸುವುಗೂಡು ಇರಲಿದೆ. ಮೂರು ಬಿಣಿಗೆ ಆಯ್ಕೆಗಳಿರುವ ಕ್ರೇಟಾ ಬೇಸ್, ಎಸ್, ಎಸ್+, ಎಸ್‌ಎಕ್ಸ್, ಎಸ್‌ಎಕ್ಸ್+, ಎಸ್‌ಎಕ್ಸ್‌ಒ ಎಂದು ಆರು ಮಾದರಿಗಳಲ್ಲೂ ಸಿಗಲಿದೆ (Base, S, S+,SX ,SX+ ,SXO). ಡೀಸೆಲ್ ಬಿಣಿಗೆಯ ಕ್ರೇಟಾ 128 ಪಿಎಸ್ ಕಸುವು ನೀಡಿ 260 ನ್ಯೂಟನ್ ಮೀಟರ್ ತಿರುಗುಬಲ ಉಂಟು ಮಾಡಲಿದೆ. ಪೆಟ್ರೋಲ್ ಕ್ರೇಟಾದ ಬಿಣಿಗೆಯಿಂದ 123 ಪಿಎಸ್ ಕಸುವು ಮತ್ತು 155 ನ್ಯೂಟನ್ ಮೀಟರ್ ತಿರುಗುಬಲ ಹೊರಬರಲಿದೆ.

**ಸಾಗಣಿ:**

1.6 ಲೀಟರ್ ಅಳತೆಯ ಬಿಣಿಗೆಯ ಡೀಸೆಲ್ ಬಂಡಿಗಳೆಲ್ಲವೂ 6 ವೇಗದ ಓಡಿಸುಗನಿಡಿತದ ಸಾಗಣಿ ಹೊಂದಿರಲಿವೆ. 1.6 ಲೀಟರ್ ನ ಡೀಸೆಲ್ ಎಸ್‌ಎಕ್ಸ್+ ಕ್ರೇಟಾದಲ್ಲಿ ಮಾತ್ರ 6 ವೇಗದ ತನ್ನಿಡಿತದ ಸಾಗಣಿ ಅಳವಡಿಸಲಾಗಿದೆ. 1.4 ಅಳತೆಯ ಡೀಸೆಲ್ ಮತ್ತು ಪೆಟ್ರೋಲ್ ಬಿಣಿಗೆಯ ಕ್ರೇಟಾಗಳೆಲ್ಲವೂ 5 ವೇಗದ ಓಡಿಸುಗನಿಡಿತದ ಸಾಗಣಿ ಪಡೆದಿರುತ್ತವೆ.

**ಮಯ್ಮಾಟ:**




ಮಯ್ಮಾಟದಲ್ಲಿ ಹ್ಯುಂಡಾಯ್ ಕ್ರೇಟಾ ಅಂದವಾಗಿದೆ. ಕ್ರೇಟಾ ಹಿಂಬಾಗ ಅಗಲವಾಗಿದ್ದು ಬಿಣಿಗವಸು ದೊಡ್ಡದಾಗಿರುವುದರಿಂದ ದೊಡ್ಡ ಅಟೋಟದ ಬಂಡಿಯಂತೆ ಕಾಣುತ್ತದೆ. ಓರಣವಾಗಿರುವ ಹಿಂದೀಪಗಳು (Tail lamp) ಬಂಡಿಯತ್ತ ಕಣ್ಸೆಳೆಯುವಂತೆ ಮಾಡಲಿವೆ. ಬಂಡಿಯ ಒಳಗಡೆಯು ಸಾಕಶ್ಟು ವಿಶೇಶತೆಗಳು ಕಾಣಸಿಗುತ್ತವೆ. ಕಯ್ ಕಾಲು ಹಾಯಾಗಿ ಚಾಚಿಕೊಂಡು ಕೂಡಲು ಜಾಗವಿದೆ. ತಲೆಯೂರುಕಗಳು ನಿಮಗಿಶ್ಟದಂತೆ ಹೊಂದಿಸಿಕೊಂಡು ಸಾಗಬಹುದು. ಎಸ್‌ಎಕ್ಸ್(ಒ) ಮಾದರಿಗಳಲ್ಲಿ ತೋರುಮಣೆಗೆ 7 ಇಂಚಿನ ಸೋಕುತೆರೆ (touch screen) ನೀಡಲಾಗಿದೆ. ಹವಾಮಾನ ಹಿಡಿತದಲ್ಲಿಟ್ಟುಕೊಳ್ಳಲು ತಿರುಗು ಗುಂಡಿ (Climate control knob),

ಬಂಡಿಯನ್ನು ಶುರು ಮಾಡಬಹುದಾದ ಒತ್ತು ಗುಂಡಿ, ಹಿನ್ನೋಟದ ತಿಟ್ಟಕ (Rear view Mirror), ತಲುಪುದಾರಿ ಏರ್ಪಾಟು, ಹಿಂದುಗಡೆ ಕೂಡುವ ಪಯಣಿಗರಿಗೆ ಕುಳಿರುಪೆಟ್ಟಿಗೆಯ ಏರ್ಪಾಟು, ಎತ್ತರಕ್ಕೆ ತಕ್ಕಂತೆ ಜೋಡಿಸಿಕೊಳ್ಳಬಹುದಾದ ಮಿಂತಿಗುರಿ ಇದರ ಮೂಲಕವೇ ರೇಡಿಯೊ, ಅಲೆಯುಲಿಗಳನ್ನು ಹಿಡಿತದಲ್ಲಿಡಬಹುದಾದ ವಿಶೇಶತೆಗಳು ಇದರಲ್ಲಿ ಸೇರಿವೆ. ಬಂಡಿಯಲ್ಲಿ ಕಾಪಿಗೂ ಸಾಕಶ್ಟು ಗಮನ ನೀಡಲಾಗಿದೆ. 6 ಗಾಳಿಚೀಲಗಳು, ಸಿಲುಕದ ತಡೆತದ ಏರ್ಪಾಟು (Anti-Lock Brake System) ಇವುಗಳು ಕ್ರೇಟಾದಲ್ಲಿ ಅಳವಡಿಸಿದ್ದಾರೆ.

ಹ್ಯುಂಡಾಯ್ ಕ್ರೇಟಾ ಅಂದದ ಬಣ್ಣಗಳಲ್ಲಿ ಕಾಣಿಸಿಕೊಳ್ಳಲಿದೆ. ಇದರಲ್ಲಿ ಬಿಳಿ, ಕೆಂಪು, ಬೆಳ್ಳಿ ಬಣ್ಣಗಳು ಮುಕ್ಯವಾದವು.ಇಂಡಿಯಾದ ಹಲವೆಡೆ 2.5 ಲಕ್ಕ ಕಿಲೋಮೀಟರ್ ಓಡಾಟ ನಡೆಸಿ ಕ್ರೇಟಾ ಒರೆಹಚ್ಚೆದ್ದು ಇನ್ನೊಂದು ವಿಶೇಶ.

ಪಯ್ಪೋಟಿ:

ಈ ಮೊದಲೇ ತಿಳಿಸಿದಂತೆ ಡಸ್ಟರ್ ಬಂಡಿಯೇ ಕ್ರೇಟಾದ ನೇರ ಎದುರಾಳಿ ಎಂದು ಬಿಂಬಿಸಲಾಗಿದೆ. ಕಸುವು ಮತ್ತು ತಿರುಗುಬಲಗಳ ವಿಶಯದಲ್ಲಿ ಕ್ರೇಟಾ ಡಸ್ಟರ್‌ಗಿಂತ ಮುಂದಿದೆ. ಉದ್ದ, ಅಗಲ, ಎತ್ತರ ಮುಂತಾದ ಆಯಗಳಲ್ಲಿ ಡಸ್ಟರ್‌ಸಾಕಶ್ಟು ದೊಡ್ಡದಿದೆ. 22 ಕಿ.ಮೀ.. ಪ್ರತಿ ಲೀಟರ್‌ಗೆ ಸಾಗುವ ಡೀಸೆಲ್ ಕ್ರೇಟಾ 19.64 ಕಿ.ಮೀ.. ಸಾಗುವ ಡಸ್ಟರ್ ಅನ್ನು ಹಿಂದಿಕ್ಕಿದೆ. ಲೀಟರ್ ಪೆಟ್ರೋಲ್ ವೊಂದಕ್ಕೆ ಕ್ರೇಟಾ 15 ಕಿ.ಮೀ..ಸಾಗಿದರೆ, ಡಸ್ಟರ್ 13 ಕಿ.ಮೀ.. ಮಾತ್ರ ಓಡಬಲ್ಲುದು.

| ಬಂಡಿಯ ಮಾದರಿ | ರೆನೋ ಡಸ್ಟರ್ | | ಹ್ಯುಂಡಾಯ್ ಕ್ರೇಟಾ | |
|---|---|---|---|---|
| ಬಿಣಿಗೆ Engine | ಡಿಸಿಐಯ್ (dCI) | | ಯು-೨ (U2) | |
| ಬಿಣಿಗೆಯ ಅಳತೆ cc | 1.5 ಲೀಟರ್ | | 1.4 ಲೀಟರ್ | 1.6 ಲೀಟರ್ |
| ಕಸುವು Power (ಪಿಎಸ್‌ಗಳಲ್ಲಿ) | 85 | 110 | 89 | 128 |
| ತಿರುಗುಬಲ Torque (ನ್ಯೂ.ಮೀ.) | 200 | 245 | 220 | 260 |
| ಸಾಗಣಿ Transmission | 5-ವೇಗದ ಓ.ಹಿ.* | 6-ವೇಗದ ಓ.ಹಿ. | 5-ವೇಗದ ಓ.ಹಿ. | 6-ವೇಗದ ಓ.ಹಿ. |
| ಮಯ್ಲಿಯೋಟ Mileage ಕಿ.ಮೀ./ಲೀ | 19.87 | 19.64 | 22 | 19 |

*ಓ. ಹಿ.- ಓಡಿಸುಗನ ಹಿಡಿತ

(ಪಟ್ಟಿ-1 ಡೀಸೆಲ್ ಮಾದರಿಗಳ ಹೋಲಿಕೆ)

| ಬಂಡಿಯ ಮಾದರಿ | ರೆನೋ ಡಸ್ಟರ್ | ಹ್ಯುಂಡಾಯ್ ಕ್ರೇಟಾ |
|---|---|---|
| ಬಿಣಿಗೆ Engine | ಕೆ4ಎಮ್ K4M | ಗಾಮಾ Gama |
| ಬಿಣಿಗೆಯ ಅಳತೆ cc | 1.6 | 1.6 |
| ಕಸುವು Power (ಪಿಎಸ್‌ಗಳಲ್ಲಿ) | 104 | 123 |
| ತಿರುಗುಬಲ Torque(ನ್ಯೂ.ಮೀ.) | 148 | 155 |
| ಸಾಗಣಿ Transmission | 5-ವೇಗದ ಓ.ಹಿ.* | 5-ವೇಗದ ಓ.ಹಿ. |
| ಮಯ್ಲಿಯೋಟ Mileage ಕಿ.ಮೀ./ಲೀ | 13 | 15 |

*ಓ. ಹಿ.- ಓಡಿಸುಗನ ಹಿಡಿತ

(ಪಟ್ಟಿ-2 ಪೆಟ್ರೋಲ್ ಮಾದರಿಗಳ ಹೋಲಿಕೆ)

| ಬಂಡಿಯ ಮಾದರಿ | ರೆನೋ ಡಸ್ಟರ್ | ಹ್ಯುಂಡಾಯ್ ಕ್ರೇಟಾ |
|---|---|---|
| ಆಯಗಳು (ಮಿಮೀ.ಗಳಲ್ಲಿ) | | |
| ಉದ್ದ Length | 4315 | 4270 |
| ಅಗಲ Width | 1822 | 1780 |
| ಎತ್ತರ Height | 1630 | 1695 |
| ಗಾಲಿಗಳ ನಡುವಿರುವ ದೂರ wheel base | 2590 | 2673 |
| ನೆಲತೆರವು Ground clearance | 205 | 183 |
| ಸರಕುಚಾಚಿಕೆ Boot space | 475 ಲೀ. | 400 ಲೀ. |

ಪಟ್ಟಿ-3 ಆಯಗಳ ಹೋಲಿಕೆ

ಬೆಲೆ:

ಡಸ್ಟರ್ ಬಂಡಿಯನ್ನು ನೆನಪಿನಲ್ಲಿಟ್ಟುಕೊಂಡೇ ಕ್ರೇಟಾದ ಬೆಲೆಯ ತೀರ್ಮಾನ ಕಯ್ಗೊಂಡಿದೆ ಹ್ಯುಂಡಾಯ್. ಪೆಟ್ರೋಲ್ ಕ್ರೇಟಾ ಸುಮಾರು 8.6 ಲಕ್ಶ ರೂ.ಗಳಿಂದ 11.3 ಲಕ್ಶಗಳಾಗಿರಲಿದೆ. 1.4 ಲೀಟರ್ ಬಿಣಿಗೆಯ ಡೀಸೆಲ್ ಕ್ರೇಟಾ 9.5 ಲಕ್ಶದಿಂದ 11.5 ಲಕ್ಶ ರೂ.ಗಳಲ್ಲಿ ಕೊಳ್ಳಬಹುದು. 1.6 ಲೀಟರ್ ಡೀಸೆಲ್ ಬಿಣಿಗೆಯ ಕ್ರೇಟಾಗೆ ನೀವು ಸುಮಾರು 11.9 ಲಕ್ಶ ರೂಪಾಯಿಗಳಿಂದ 14 ಲಕ್ಶಗಳವರೆಗೆ ಕೊಡಬೇಕಾಗಬಹುದು. ಮುಂಗಡ ಕಾಯ್ದಿರಿಸಿ ಕೊಳ್ಳುಗರು 40 ರಿಂದ 50 ಸಾವಿರ ರೂಪಾಯಿಗಳನ್ನು ತೆರಬೇಕಾಗುತ್ತದೆ. ಇಲ್ಲಿ ನೀಡದ ಬೆಲೆಗಳು ಅಂದಾಜು ಬೆಲೆಗಳಾಗಿದ್ದು, ಆಯಾ ನಾಡಿನ ರಸ್ತೆ ತೆರಿಗೆಗೆ ತಕ್ಕಂತೆ ಬದಲಾಗಬಹುದು.

| ಬೆಲೆ | ಪೆಟ್ರೋಲ್ ಕ್ರೇಟಾ 1.6 | ಡೀಸೆಲ್ ಕ್ರೇಟಾ 1.4 | ಡೀಸೆಲ್ ಕ್ರೇಟಾ 1.6 |
|---|---|---|---|
| ಲಕ್ಶ ರೂ.ಗಳಲ್ಲಿ | 8.6 - 11.3 | 9.5 – 11.5 | 11.9 – 14.0 |

ಪಟ್ಟಿ-4. ಕ್ರೇಟಾ ಕಾರಿನ ಬೆಲೆ

ಕೊಳ್ಳಲು ಆಸಕ್ತಿ ಇದ್ದವರು www.hyundaicreta.com ಈ ಮಿಂದಾಣದಲ್ಲಿ ಹೆಚ್ಚಿನ ವಿವರ ಪಡೆದು ಕೊಳ್ಳಬಹುದು. ಮಂದಿಯ ಮೆಚ್ಚುಗೆಯ ಕಾರುಗಳನ್ನು ತಯಾರಿಸುತ್ತ ಹೆಸರುಗಳಿಸಿರುವ ಹ್ಯುಂಡಾಯ್ , ಕ್ರೇಟಾ ಮಾದರಿ ಮೂಲಕ ಮತ್ತೊಂದು ಗೆಲುವಿನ ಕತೆ ಮುಂದುವರಿಸಲಿ.

*(ತಿಟ್ಟಸೆಲೆ: hyundaicreta.com)*

# ಇಂದು ಬಿಡುಗಡೆಯಾಗಲಿದೆ ಮಾರುತಿ ಸುಜುಕಿ S-CROSS

**05.08.2015**




ಅಗ್ಗದ ಬೆಲೆಯ ಬಂಡಿಗಳು ಹಾಗೂ ಸಾಕಶ್ಟು ನೆರವು ತಾಣಗಳ ಬಲೆ ಹರಡಿಕೊಂಡು ಹೆಸರು ಮಾಡಿರುವ **ಮಾರುತಿ ಸುಜುಕಿ** ಬಂಡಿಗಳು ಈಗಲೂ ಇಂಡಿಯಾದ ಕೊಳ್ಳುಗರ ಮೊದಲ ಆಯ್ಕೆ. ಇಂಡಿಯಾದಲ್ಲಿ ಮಾರಾಟವಾಗುವ ಪ್ರತಿ ಮೂರನೇ ಕಾರು ಮಾರುತಿ ಸುಜುಕಿ ಕೂಟದ್ದಂತೆ! ಬಲು ಸುದ್ದಿಮಾಡಿರುವ ಮಾರುತಿ ಸುಜುಕಿ ಕೂಟದವರ ಹೊಚ್ಚ ಹೊಸ **ಎಸ್-ಕ್ರಾಸ್** (S-CROSS) ಎಂಬ ಬಂಡಿ ಇಂದಿನಿಂದ ಇಂಡಿಯಾದ ಬೀದಿಗಳಲ್ಲಿ ಕಂಡು ಬರಲಿದೆ.




ಮಾರುತಿ ಸುಜುಕಿ ಕೂಟದವರು ಎಸ್-ಕ್ರಾಸ್ ಕಾರನ್ನು ಬಿಡುಗಡೆ ಮಾಡುತ್ತಿರುವ ವಿಶಯವನ್ನರಿತ ಹ್ಯುಂಡಾಯ್ ತನ್ನ ಕ್ರೇಟಾ ಬಂಡಿಯನ್ನು ಅದಕ್ಕೂ ಮೊದಲೇ ಬಿಡುಗಡೆ ಮಾಡಿ ಮಾರುಕಟ್ಟೆಯನ್ನು ಕಬಳಿಸುವ ತರಾತುರಿ ತೋರಿದ್ದು ಈಗ ಹಳೆಯ ಸುದ್ದಿ. ಹೆಚ್ಚು ಕೊಳ್ಳುಗರಿಲ್ಲದೇ

ಕಂಗೆಟ್ಟಿದ್ದ ಸೆಡಾನ್ ಮಾದರಿ ಎಸ್‌ಎಕ್ಸ್-4(SX-4) ಅನ್ನು ಮಾರುಕಟ್ಟೆಯಿಂದ ಹಿಂತೆಗೆದು ಎಸ್-ಕ್ರಾಸ್ ಎಂಬ ಕಿರು ಹಲಬಳಕೆಯ ಬಂಡಿಯಂತಿರುವ ಕಾರನ್ನು ಸುಜುಕಿ, ಇಂಡಿಯಾದಲ್ಲಿ ಹೊರತರುವ ಮನಸ್ಸು ಮಾಡಿತ್ತು. ಇಂದು ಅದನ್ನು ನಿಜವಾಗಿಸಲಿದೆ ಮಾರುತಿ ಸುಜುಕಿ.

ಇಂಡಿಯಾದಲ್ಲಿ ಗೆಲುವನ್ನೇ ಮಯ್ಗೂಡಿಸಿಕೊಂಡಿರುವ ಸುಜುಕಿ ಕೂಟದವರಿಗೆ ತಿಂಗಳಶ್ಟು ಹಳೆಯದಾದ ಸೆಲೆರಿಯೊ ಡಿಸೇಲ್ ಸೋಲು ತಂದಿದೆ. ಈ ವರುಶದ ಕೊನೆಯಲ್ಲಿ ನಾಲ್ಕಾರು ಹೊಸ ಮಾದರಿ ಬಂಡಿಗಳನ್ನು ನೀಡುವ ಹಮ್ಮುಗೆಯಲ್ಲಿರುವ ಇಂಡಿಯಾದ ಬಲು ದೊಡ್ಡ ಕೂಟಕ್ಕೆ ಈ ಸೋಲು ಹೆಚ್ಚೇನು ಕಾಡಲಿಕ್ಕಿಲ್ಲ. ಎಸ್-ಕ್ರಾಸ್ ಮೂಲಕ ಇನ್ನೊಂದು ಗೆಲುವಿನ ಓಟಕ್ಕೆ ಮಾರುತಿ ಸುಜುಕಿ ಅಣಿಯಾಗುತ್ತಿರಬಹುದು. ಹೊಸ ಎಸ್‌ಕ್ರಾಸ್ ಬಂಡಿಯ ಇಣುಕು ನೋಟ ಇಲ್ಲಿದೆ.

**ಬಿಣಿಗೆ (engine):**







ಪೆಟ್ರೋಲ್ ಬಿಣಿಗೆಗಳನ್ನೇ ಜೀವಾಳವನ್ನಾಗಿಸಿಕೊಂಡಿರುವ ಮಾರುತಿ ಸುಜುಕಿ ಕೂಟದವರು ಹೊಸ ಎಸ್-ಕ್ರಾಸ್ ಬಂಡಿಯಲ್ಲಿ ಪೆಟ್ರೋಲ್ ಬಿಣಿಗೆಯನ್ನು ಅಳವಡಿಸಿಲ್ಲ! ಕೇವಲ ಡೀಸೆಲ್ ಆಯ್ಕೆಯನ್ನಶ್ಟೇ ನೀಡಲಾಗಿದ್ದು ಹಲವರಿಗೆ ಅಚ್ಚರಿ, ನಿರಾಶೆ ಮೂಡಿಸಿದೆ. ಎಸ್-ಕ್ರಾಸ್ ಬಂಡಿ ಡಿಡಿಆಯ್‌ಎಸ್-200 ಮತ್ತು ಡಿಡಿಆಯ್‌ಎಸ್-320 ಎರಡು ಡೀಸೆಲ್ ಬಿಣಿಗೆಗಳ ಆಯ್ಕೆಗಳಲ್ಲಿ ಸಿಗಲಿದೆ. ಡಿಡಿಆಯ್‌ಎಸ್-200 ಬಿಣಿಗೆ ಅದೇ ಹಳೆಯ 1.3 ಲೀಟರ್ ಅಳತೆಯದ್ದು.

| ಎಸ್‌ಕ್ರಾಸ್ | ಡಿಡಿಆಯ್‌ಎಸ್-320 | ಡಿಡಿಆಯ್‌ಎಸ್-200 |
|---|---|---|
| **ಬಿಣಿಗೆ** | 4 ಉರುಳೆಗಳದ್ದು | 4 ಉರುಳೆಗಳದ್ದು |
| **ಬಿಣಿಗೆಯ ಅಳತೆ** (cc) | 1.6 ಲೀ | 1.3 ಲೀ |
| **ಕಸುವು** (Power) | 118 | 89 |
| **ತಿರುಗುಬಲ** (Torque) ನ್ಯೂಟನ್-ಮೀ. | 320 | 200 |
| **ಸಾಗಣಿ** (Transmission) | 6-ವೇಗದ ಓ.ಹಿ. | 5-ವೇಗದ ಓ.ಹಿ. |
| **ಮಯ್ಲಿಯೋಟ** (Mileage) ಕಿ.ಮೀ./ಲೀ | 22 | 23.65 |

ಓ.ಹಿ.- ಓಡಿಸುಗನ ಹಿಡಿತದ್ದು

ಇಂಡಿಯಾ ಮಾರುಕಟ್ಟೆಯಲ್ಲಿ ಮಾರುತಿ ಸುಜುಕಿ ಕೂಟ ಸೇರಿದಂತೆ ಹಲವು ಇತರೆ ಕೂಟಗಳ ಬಂಡಿಯಲ್ಲೂ ಕಾಣಸಿಗುವ 1.3 ಲೀಟರ್‌ನಲ್ಲಿ ಹೆಚ್ಚೇನು ಬದಲಾವಣೆಗಳು ಕಂಡು ಬರುವುದಿಲ್ಲ. ಆದರೆ ಡಿಡಿಆಯ್‌ಎಸ್-320 ಹೆಸರಿನಡಿ 1.6 ಲೀಟರ್ ಅಳತೆಯ ಬಿಣಿಗೆಯೊಂದನ್ನು ಸುಜುಕಿ ಕೂಟ ಇಂಡಿಯಾದ ಕೊಳ್ಳುಗರ ಮುಂದಿಡುತ್ತಿದೆ.

ಹೊಸ ಬಿಣಿಗೆಯಲ್ಲಿ ಎರಡು ಮೇಲುಬ್ಬುಗುಣಿಗಳು (Double Overhead Camshafts - DOHC) ಇರಲಿದ್ದು ಕಡಿಮೆ ಉರುವಲಿಗೆ ಹೆಚ್ಚಿನ ಅಳವುತನ (efficiency) ನೀಡಲಿದೆ. 1.6 ಲೀಟರ್‌ನ ಬಿಣಿಗೆ 118 ಕುದುರೆಬಲ ಕಸುವು ನೀಡಿ, 320 ನ್ಯೂಟನ್-ಮೀಟರ್‌ಗಳಷ್ಟು ತಿರುಗುಬಲದ (torque) ಮೂಲಕ ಗಾಲಿಗಳನ್ನು ಮುಂದೆ ಸಾಗಿಸಲಿದೆ.

**ಸಾಗಣಿ(transmission):**

ಎರಡು ಬಿಣಿಗೆಗಳೊಂದಿಗೆ ಓಡಿಸುಗನಿಡಿತದ ಸಾಗಣಿಯನ್ನು ಜೋಡಿಸಲಾಗಿದೆ. ಡಿಡಿಆಯ್‌ಎಸ್-320 ಗೆ 6 ವೇಗದ ಮತ್ತು ಡಿಡಿಆಯ್‌ಎಸ್ - 200 ಗೆ 5 ವೇಗದ ಸಾಗಣಿಯನ್ನು ಅಳವಡಿಸಲಾಗಿದೆ. ತನ್ನಿಡಿತದ ಸಾಗಣಿ (automatic transmission) ಇದರಲ್ಲಿ ಕೊಡಲಾಗಿಲ್ಲ.

**ಮಯ್ಮಾಟ:**

ಎಸ್-ಕ್ರಾಸ್ ಬಂಡಿಯನ್ನು ಕಿರು ಹಲಬಳಕೆ ಬಂಡಿಯೆಂಬಂತೆ ಬಿಂಬಿಸಲಾಗಿತ್ತು ಆದರೆ ಯಾವ ಕಡೆಯಿಂದ ಕಣ್ಣಾಡಿಸಿದರೂ ಇದು ಕಿರು ಹಲಬಳಕೆಯ ಬಂಡಿಯಂತೆ ಕಾಣದು. 180 ಮಿಲಿಮೀಟರ್ ಇರುವ ಕಿರಿದಾದ ಬಂಡಿಯ ನೆಲತೆರವು ಕೂಡ ಇದಕ್ಕೆ ಹಿಡಿದ ಕನ್ನಡಿ. ಮಾರುತಿ ಸುಜುಕಿ ಕೂಟದವರು ಇದನ್ನು ಒಪ್ಪಿಕೊಂಡಿದ್ದು ಎಸ್-ಕ್ರಾಸ್ ಕಿರು ಹಲಬಳಕೆ ಕಾರಿಗೆ ಸೇರುವುದಿಲ್ಲ ಇದೊಂದು ಪ್ರೀಮಿಯಮ್ ಕ್ರಾಸೋವರ್ (Premium Crossover) ಎಂದು ಕರೆದಿದ್ದಾರೆ.

ಕ್ರಾಸೋವರ್ ಬಂಡಿಗಳೆಂದರೆ ಅತ್ತ ಸೆಡಾನ್ ಆಗಿರದೇ, ಇತ್ತ ಹಲಬಳಕೆಯ ಬಂಡಿಯೂ ಆಗಿರದೇ ಇವೆರಡರ ನಡುವಿನ ಬೆರಕೆಯ ತಳಿ. ಇವುಗಳು ಹೊರದೇಶಗಳಾದ ಅಮೇರಿಕಾ, ಯೂರೋಪ್, ಜಪಾನ್‌ಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಒಟ್ಟಿನಲ್ಲಿ ಹೇಳುವುದಾದರೆ ಎಸ್-ಕ್ರಾಸ್ ಬಂಡಿ ಒಂದು ದೊಡ್ಡ ಹಿಂಗದ (hatchback) ಕಾರು ಎನ್ನಲು ಅಡ್ಡಿಯಿಲ್ಲ.

ಒಂದೇ ಸಾಲಿನಲ್ಲಿ ಓರಣವಾಗಿ ಜೋಡಿಸಲಾಗಿರುವ ಮುಂದೀಪಗಳು (head lamp), ಎರಡು ಪಟ್ಟಿಯ ಮುನ್ಕಂಬಿ ತೆರೆ (front grill), ರೆಕ್ಕೆಯಂತೆ ಚಾಚಿರುವ ಹೊರಗನ್ನಡಿಗಳು ನೋಡುಗರ ಕಣ್ಣಿಗೆ ಅಂದವನ್ನಿಸುತ್ತವೆ. ಇಶ್ಟು ಬಿಟ್ಟರೆ ಹೊರ ಮಯ್ಮಾಟದಲ್ಲೇನು ಮೋಡಿ ಮಾಡದ ಎಸ್-ಕ್ರಾಸ್ ಒಳನೋಟದಲ್ಲಿ ಕೊಳ್ಳುಗರನ್ನು ಸೆಳೆಯಬಲ್ಲುದು.



ಬಂಡಿಯಲ್ಲಿ ನಯವಾದ ಕೂರಿರ್ಕೆ ಜವಳಿ (seat upholstery), ಅದಕ್ಕೆ ತಕ್ಕ ತೋರುಮಣೆ ಓಡಿಸುಗನಿಗೆ ಹಿಡಿಸುವಂತಿವೆ. ಕಾಲು ಚಾಚಲು, ತೋಳು ಊರಲು (shoulder room) ಸಾಕಶ್ಟು ಜಾಗ ಮಾಡಿರುವುದು ದೂರದ ಪಯಣಗಳನ್ನು ಹಿತವಾಗಿಡಲಿದೆ. ತಲೆಯೂರಲು ಜಾಗ ಹೆಚ್ಚೇನು ಇಲ್ಲದಿದ್ದರೂ ಪರವಾಗಿಲ್ಲ ಎನ್ನಬಹುದು. ಮದ್ಯಮ ಗಾತ್ರದ ಸರಕು ಚಾಚು, ಕುಟುಂಬವೊಂದರ ಸರಕು ಚೀಲಗಳನ್ನು ಹೊತ್ತೊಯ್ಯಲು ಸಾಕಾಗಬಹುದು. ಬಂಡಿಯ ಪ್ರತಿ ಬಾಗಿಲಿನಲ್ಲಿ ನೀರಿನ ಬಾಟಲಿಯಿಡಲು ಇಡುದಾಣಗಳು (bottle holders), ಮುಂಬಾಗದಲ್ಲಿ ಸರಕು ಗೂಡುಗಳು (glove box) ಹೆಚ್ಚಿನ ಸಾಮಾನುಗಳನ್ನು ಸಾಗಿಸಲು ನಿಮ್ಮ ನೆರವಿಗೆ ಬರಲಿವೆ.

ಎಸ್-ಕ್ರಾಸ್ ಅಲ್ಪಾ ಮಾದರಿಗಳಲ್ಲಿ ತಲುಪುದಾರಿಯ ಏರ್ಪಾಟು (navigation system), ತಂತಾನೇ ಹವಾಮಾನ ಹಿಡಿತದಲ್ಲಿಡುವ ಏರ್ಪಾಟು (auto climate control), ತಂತಾನೇ ಕೆಲಸ ಮಾಡುವ ಒರೆಸುಕಗಳು (automatic wipers), ತಂತಾನೇ ಶುರುವಾಗುವ ಮುಂದೀಪಗಳು (automatic headlamps) ಮತ್ತು ತಟ್ಟೆ ತಡೆತದ ಏರ್ಪಾಟು (disc brake) ಸಿಗಲಿದೆ. ಇದಲ್ಲದೇ ಬಂಡಿಯಲ್ಲಿ ತಿಳಿನಲಿ ಏರ್ಪಾಟು (infotainment) ನೀಡಲಾಗಿದ್ದು ಇದರಿಂದ ನೀವು ನಿಮ್ಮ ಚೂಟಿಯುಲಿಯನ್ನು (smart phone) ಬಂಡಿಯ ತೋರುಮಣೆಗೆ ಜೋಡಿಸಿಕೊಳ್ಳಬಹುದು.

ಎಸ್-ಕ್ರಾಸ್‌ನ ಕಿರಿಯ ಸಿಗ್ಮಾ ಮಾದರಿಯಲ್ಲೂ 2 ಗಾಳಿಚೀಲಗಳು ಮತ್ತು ಸಿಲುಕಿನ ತಡೆತದ ಏರ್ಪಾಟು (Anti-lock Braking System) ನೀಡಿದ್ದು ಓಡಿಸುಗರ ಕಾಪುವಿಕೆಗೆ (safety) ಮಾರುತಿ ಸುಜುಕಿ ಕೂಟ ಹೆಚ್ಚಿನ ಒತ್ತು ನೀಡಿದ್ದು ಕಂಡು ಬರುತ್ತದೆ. ಹಿಂಬಾಗದ ಪಯಣಿಗರಿಗೆಂದೇ ಕುಳಿರು ಪೆಟ್ಟಿಗೆಯ ಕಿಂಡಿ (AC vent) ನೀಡದೇ ಇರುವುದು ಕೊರತೆಯಾಗಿ ಎದ್ದು ಕಾಣುತ್ತದೆ.



ನೀಲಿ, ಕಂದು, ಬೆಳ್ಳಿ, ಬಿಳಿ ಮತ್ತು ಚಾಕಲೇಟ್ ಹೀಗೆ ಅಯ್ದು ಬಣ್ಣಗಳಲ್ಲಿ ಎಸ್-ಕ್ರಾಸ್ ದೊರೆಯಲಿದೆ.

**ಪಯ್ಪೋಟಿ:**

ಈ ತೆರನಾದ ಬೆರಕೆ ತಳಿ ಬಂಡಿಗಳು ನಮ್ಮ ದೇಶದಲ್ಲಿ ಮಂದಿಯ ಒಲವು ಗಳಿಸಿದ್ದು ಕಡಿಮೆಯೇ. ಕಿರು ಹಳಬಳಕೆಯ ಬಂಡಿಯಲ್ಲದಿದ್ದರೂ ಕೆಲವರು ಹೇಳುವಂತೆ ಎಸ್‌ಕ್ರಾಸ್ ಹ್ಯುಂಡಾಯ್ ಕ್ರೇಟಾಗೆ ಎದುರಾಳಿಯಂತೆ. ಈ ವಾದವನ್ನು ಹಲವರು ಅಲ್ಲಗಳೆದಿದ್ದು, ಎಸ್‌ಕ್ರಾಸ್ ಬೇರೆಯ ಪಂಗಡಕ್ಕೆ ಸೇರಿದೆ ಎಂದಿದ್ದಾರೆ. ಇತ್ತೀಚಿನ ವರುಶಗಳಲ್ಲಿ ಹೊರಬಂದ ಟೊಯೊಟಾ ಲಿವಾ ಕ್ರಾಸ್, ಪೋಲೊ ಕ್ರಾಸ್, ಪಿಯಾಟ್ ಅವೆಂಚುರಾ ಇಂತ ಆಟೋಟ ಒಲವಿಗರ ಕಾರುಗಳಿಗೆ ಕೂಡ ಇದು ಎದುರಾಳಿಯಾಗಬಹುದೇ ಎಂಬ ಕೇಳ್ವಿ ಮೂಡಿಬಂದಿದೆ. ಇದಕ್ಕೆ ಬರುವ ದಿನಗಳಲ್ಲಿ ಉತ್ತರ ಸಿಗಲಿದೆ.

**ಬೆಲೆ:**

ಸುಜುಕಿ ಕೂಟದವರು ಬಂಡಿಯ ಬೆಲೆಯನ್ನು ಹೊರಹಾಕಿಲ್ಲ. ಕೆಲವು ಮೂಲಗಳ ಪ್ರಕಾರ 8 ರಿಂದ 13 ಲಕ್ಶಗಳಲ್ಲಿ ಎಸ್-ಕ್ರಾಸ್‌ನ ಸಿಗ್ಮಾ, ಅಲ್ಪಾ, ಜೀಟಾ ಎಂಬ ವಿವಿದ ಬಗೆಗಳು ಸಿಗಲಿವೆ.

ಎಸ್‌ಕ್ರಾಸ್‌ಗಳಿಗೆಂದೇ ಮಾರುತಿ ಸುಜುಕಿಯ **ನೆಕ್ಸಾ** (Nexa) ಎಂಬ ಹೊಸ ಮಳಿಗೆಗಳು ಇಂಡಿಯಾದ ಹಲವೆಡೆ ತಲೆಯತ್ತಿವೆ. ತನ್ನ ಸಿರಿತನದ ಕಾರುಗಳನ್ನು ಮಾರಲು ಮಾರುತಿ ಸುಜುಕಿ ಕೂಟ ಇದೀಗ ಹೊಸತಾಗಿ ನೆಕ್ಸಾ ಎಂಬ ಮಳಿಗೆಗಳ ಬಲೆಯನ್ನು ಇಂಡಿಯಾದ ತುಂಬೆಲ್ಲ ಹೆಣೆಯುತ್ತಿದೆ. ನೆಕ್ಸಾಗಳಲ್ಲಿ ಕಾಣಿಸಿಕೊಳ್ಳಲಿರುವ ಮೊದಲ ಕಾರಾಗಿ ಎಸ್‌ಕ್ರಾಸ್ ದೊರೆಯಲಿದ್ದು ಮುಂಬರುವ ದಿನಗಳಲ್ಲಿ ಹೆಚ್ಚು ಬೆಲೆಯ ಸಿಯಾಜ್ (Ciaz), ಗ್ರ್ಯಾಂಡ್ ವಿಟಾರಾ (Grand vitara) ಮಾದರಿಗಳು ನೆಕ್ಸಾದಲ್ಲಿರಲಿವೆ ಎಂಬ ಸುದ್ದಿ ಹೊರಬಿದ್ದಿದೆ.

ಎಸ್-ಕ್ರಾಸ್‌ನ ವಿವಿದ ಪರಿಚೆಗಳನ್ನು ಕೆಳಕಂಡ ಪಟ್ಟಿಯಲ್ಲಿ ನೋಡಬಹುದು.

| ಆಯಗಳು (ಮಿಮೀ.ಗಳಲ್ಲಿ) | |
|---|---|
| ಉದ್ದ (Length) | 4300 |
| ಅಗಲ (Width) | 1765 |
| ಎತ್ತರ (Height) | 1590 |
| ಗಾಲಿಗಳ ದೂರ (wheel base) | 2600 |
| ನೆಲತೆರವು (Ground clearance) | 180 |

| ಇತರೆ ಪರಿಚೆಗಳು | |
|---|---|
| ತೂಕ (Weight) | 1275 ಕೆ.ಜಿ.ಗಳು |
| ಉರುವಲು ಚೀಲ (Fuel tank) | 48 ಲೀ. |
| ತಡೆತ (Brakes) | ತಟ್ಟೆ ತಡೆತ |
| ಬೆಲೆ | 8-13 ಲಕ್ಶ ರೂ.ಗಳು |
| ಸರಕು ಚಾಚಿಕೆ (Boot space) | 353 ಲೀ. |

*(ಮಾಹಿತಿ ಮತ್ತು ತಿಟ್ಟ ಸೆಲೆಗಳು: www.marutisuzuki.com, www.autocarindia.com,www.zigwheels.com)*

# ಮಹೀಂದ್ರಾ ಹೊರತಂದ ಜಗಜಟ್ಟಿ ಮಲ್ಲ - TUV3OO

**14.09.2015**




**ಮಹೀಂದ್ರಾ ಮತ್ತು ಮಹೀಂದ್ರಾ** ಹೆಚ್ಚು ಕಡಿಮೆ ಇಂಡಿಯಾದಲ್ಲಿ ಎಲ್ಲರಿಗೂ ಗೊತ್ತಿರುವ ಹೆಸರು. ಇಂಡಿಯಾದ ಬಲು ದೊಡ್ಡ ಕೂಟಗಳಲ್ಲೊಂದಾದ ಮಹೀಂದ್ರಾ ಮತ್ತು ಮಹೀಂದ್ರಾ ಆಯ್‌ಟಿ, ಹಣಕಾಸು, ತಾನೋಡ ಉದ್ಯಮವಲ್ಲದೇ ಇತ್ತೀಚೆಗೆ ಬಾನೋಡಗಳ ಉದ್ಯಮದಲ್ಲಿ ತೊಡಗಿಕೊಳ್ಳುವ ಮೂಲಕ ತನ್ನ ಹರವನ್ನು ಎಲ್ಲೆಡೆ ಚಾಚಿಕೊಂಡಿದೆ.

ಕಾರು, ಹಲಬಳಕೆ ಬಂಡಿ, ಲಾರಿ, ಬಸ್ಸು, ಟ್ರ್ಯಾಕ್ಟರ್ ಒಳಗೊಂಡ ತಾನೋಡದ ಉದ್ಯಮದಲ್ಲಿ ಮಹೀಂದ್ರಾ ಕೂಟಕ್ಕೆ ಇತ್ತೀಚಿನ ಕೆಲವು ವರುಶಗಳು ಅಷ್ಟೊಂದು ಹೇಳಿಕೊಳ್ಳುವಂತ ಲಾಬ ತಂದು ಕೊಟ್ಟಿಲ್ಲ. ಮಹೀಂದ್ರಾ ಕೂಟದವರಿಂದ ಬಗೆಬಗೆಯ ಹೊಸ ಬಂಡಿಗಳು ಹೊರಬಂದರೂ ಮಾರುತಿ ಸುಜುಕಿ, ಟಾಟಾ ನಂತಹ ಪಳಗಿದ ದೇಶಿ ಪಯ್ಪೋಟಿಗಾರರು ಒಂದೆಡೆಯಾದರೆ ರೆನೊ(Renault), ಹ್ಯುಂಡಾಯ್(Hyundai), ಪೋರ್ಡ್(Ford), ಟೊಯೊಟಾ(Toyota) ನಂತ ಹೊರನಾಡಿನ ಬಂಡಿ ತಯಾರಕರು ಇನ್ನೊಂದೆಡೆ ಬಿರುಸಿನ ಪಯ್ಪೋಟಿ ನೀಡುತ್ತಿದ್ದಾರೆ.

ಕಳೆದ ವರುಶದವರೆಗೆ ಇಂಡಿಯಾದ ಮೂರನೇ ಅತಿದೊಡ್ಡ ಬಂಡಿ ತಯಾರಕ ಕೂಟವಾಗಿದ್ದ ಮಹೀಂದ್ರಾ, ಜಪಾನಿನ ಹೊಂಡಾ ಮುಂದೆ ಮಂಡಿಯೂರಿ ನಾಲ್ಕನೇಯ ಸ್ತಾನಕ್ಕೆ ಕುಸಿದು ಕಂಗೆಟ್ಟಿದೆ. ಈ ಕುಸಿತದಿಂದ ಮತ್ತೆ ಮೇಲೆದ್ದು ಬರುವ ಯತ್ನದಲ್ಲಿಯೇ ಮೊನ್ನೆ ಸೆಪ್ಟೆಂಬರ್-10 ರಂದು ಹೊಸದೊಂದು ಬಂಡಿಯನ್ನು ಹೊರತಂದಿದೆ. ಅದೇ ಮಹೀಂದ್ರಾ **ಟಿಯುವಿ 3ಒಒ** (TUV3OO).

ಮೊದಲಿನಿಂದಲೂ ಆಟೋಟ ಬಂಡಿಗಳ ತಯಾರಿಕೆಯಲ್ಲಿ ಮಹೀಂದ್ರಾ ಹೆಸರುವಾಸಿ. ಡಸ್ಟರ್, ಎಕೊ ಸ್ಪೋರ್ಟ್, ಕ್ರೇಟಾ ಮುಂತಾದ ಕಿರು ಆಟೋಟದ ಬಂಡಿಗಳ(Compact SUV) ಮಾರುಕಟ್ಟೆ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿರುವ ಕಾರಣ ಟಿಯುವಿ 3ಒಒ ಎಂಬ ಕಿರು ಆಟೋಟದ ಬಂಡಿ ತಯಾರಿಸಿ ಮೇಲೇಳುವ ಹವಣಿಕೆಯಲ್ಲಿದೆ.



ಮೂರು ವರುಶಗಳ ಹಿಂದೆ ಯೂ301(U301) ಹೆಸರಿನಲ್ಲಿ ಶುರುವಾದ ಹಮ್ಮುಗೆಯೇ ಇಂದು “ಟಿಯುವಿ 3ಒಒ” ಬಂಡಿಯಾಗಿ ಹೊರಹೊಮ್ಮಿದೆ. ಇಂಡಿಯಾದಲ್ಲಿನ ಒರಟು ಬೀದಿಗಳಿಗೆಂದೇ ಗಟ್ಟಿ ಬಂಡಿಯೊಂದನ್ನು ತಯಾರಿಸಿದ್ದೇವೆ “ಟಿಯುವಿ” ಹೆಸರಿನ ಮೊದಲಲ್ಲಿರುವ ಟಿ ಎಂದರೆ ಟಪ್(Tough), ಟಪ್ ಉಟಿಲಿಟಿ ವೆಹಿಕಲ್(Tough Utility Vehicle) ನಿಮ್ಮ ಮುಂದಿದೆ ಎಂದು ಕೂಟದ ಹಿರಿಯ ಮೇಲಾಳುಗಳಾದ ಆನಂದ ಮಹೀಂದ್ರಾ (Anand Mahindra), ಪವನ್ ಗೊಯಂಕಾ (Pawan Goenka) ಪುಣೆಯ ಬಳಿಯ ಚಾಕಣ್‌ನ ಮಹೀಂದ್ರಾ ಕಾರ್ಕ್ಕಾನೆಯಲ್ಲಿ ನಡೆದ ಬಿಡುಗಡೆ ಸಮಾರಂಬದಲ್ಲಿ ಹೇಳಿಕೊಂಡಿದ್ದಾರೆ.



ಇಟಲಿಯ ಪ್ರಮುಕ ಪಿನಿನ್ ಪರಿನಾ(Pinin Farina) ಸಂಸ್ತೆಯ ಈಡುಗಾರರ(designers) ಜೊತೆಗೂಡಿ ಟಿಯುವಿ 3ಒಒ ಮಾಡಲಾಗಿದ್ದು ವಿಶೇಶ. ಒರಟಾದ ಈ ಕಿರು ಹಳಬಳಕೆಯ ಬಂಡಿಯಲ್ಲಿ ಏನಿರಲಿದೆ ಎಂಬುದನ್ನು ನೋಡೋಣ ಬನ್ನಿ.

**ಬಿಣಿಗೆ:**

ಕ್ವಾಂಟೋ(Quanto) ಬಂಡಿಯಲ್ಲಿ ಬಳಸಲಾಗಿದ್ದ ಎಮ್‌ಹಾಕ್80 (mHawk80) 3 ಉರುಳೆಯ ಬಿಣಿಗೆಯನ್ನೇ ಇಲ್ಲೂ ಕೂಡ ಬಳಸಲಾಗಿದೆ. ಇಲ್ಲಿನ ವಿಶೇಶವೆಂದರೆ ಈ 1.5 ಲೀಟರ್‌ನ ಬಿಣಿಗೆಗೆ 2 ಗಾಳಿದೂಡುಕಗಳನ್ನು (twin turbocharger) ಅಳವಡಿಸಿ ತಿರುಗುಬಲವನ್ನು 230 ನ್ಯೂಟನ್ ಮೀಟರ್‌ಗೆ ಹೆಚ್ಚಿಸಲಾಗಿದೆ. 84 ಕುದುರೆಬಲ ನೀಡುವ ಬಿಣಿಗೆ ಇದಾಗಿರಲಿದೆ. ಎಎಮ್‌ಟಿ (AMT) ಮಾದರಿಗಳ ಕುದುರೆಬಲ ಸ್ವಲ್ಪ ಕಡಿತಗೊಂಡು 81 ಕುದುರೆಬಲದಶ್ಟಿರಲಿದೆ. ಬಿಣಿಗೆ ಬಿಎಸ್-4 ಕೆಡುಗಾಳಿ ಗುಣಮಟ್ಟಕ್ಕೆ ತಕ್ಕಂತೆ ಮಾಡಲಾಗಿದೆ. ಬಂಡಿಯ ಮಯ್ಲಿಯೋಟ ಪ್ರತಿ ಲೀಟರ್‌ಗೆ 18.49 ಕಿ.ಮೀ.. ಆಗಲಿದೆ.

| ಟಿಯುವಿ 3ಒಒ (TUV 300) | |
|---|---|
| ಬಿಣಿಗೆ (Engine) | ಎಮ್‌ಹಾಕ್ (mHawk80) 3 ಉರುಳೆಗಳ |
| ಬಿಣಿಗೆಯ ಅಳತೆ (CC) | 1. 5 ಲೀ |
| ಕಸುವು (Power) | 84 ಹೆಚ್.ಪಿ. |
| ತಿರುಗುಬಲ (Torque). | 230 ನ್ಯೂಟನ್-ಮೀ |
| ಸಾಗಣಿ (Transmission) | 5-ವೇಗದ ಓ.ಹಿ. |
| ಮಯ್ಲಿಯೋಟ (Mileage) | 18. 49 ಕಿ.ಮೀ./ಲೀ |
| ಕೆಡುಗಾಳಿ (Emission Level) | ಬಿಎಸ್ 4 (BS IV) |

ಓ.ಹಿ.- ಓಡಿಸುಗನ ಹಿಡಿತದ್ದು


**ಸಾಗಣಿ (Transmission):**


ಟಿಯುವಿ ಬಂಡಿ ಒಟ್ಟು 7 ಬಗೆಗಳಲ್ಲಿ ಮಾರಾಟಗೊಳ್ಳುತ್ತಿದೆ. ಎಲ್ಲ ಮಾದರಿಗಳಲ್ಲಿ 5 ವೇಗದ ಸಾಗಣಿ ಕೊಡಲಾಗಿದೆ. ಟಿ-4, ಟಿ-4+,ಟಿ-6, ಟಿ-6+, ಟಿ-8 ಬಗೆಗಳಲ್ಲಿ ಓಡಿಸುಗನ ಹಿಡಿತದ ಸಾಗಣಿಯಿದ್ದರೆ, ಟಿ-6+ ಎಎಮ್‌ಟಿ , ಟಿ-8 ಎಎಮ್‌ಟಿ ಮಾದರಿಗಳಿಗೆ ಎಎಮ್‌ಟಿ ಎಂಬ ಅರೆ ಓಡಿಸುಗನಿಡಿತದ ಸಾಗಣಿ ಅಳವಡಿಸಿ ಹೆಚ್ಚಿನ ಮಯ್ಲಿಯೋಟ ದೊರಕುವಂತೆ ಮಾಡಲಾಗಿದೆ.

**ಮಯ್ಮಾಟ:**

ಕಾದಾಟದ ಟ್ಯಾಂಕರ್‌ನಿಂದ ಹುರುಪುಗೊಂಡು ಟಿಯುವಿಯ ಮಯ್ಮಾಟವನ್ನು ಅದನ್ನು ಹೋಲುವಂತೆ ಗಟ್ಟಿ ಮುಟ್ಟಾಗಿಸಲಿದೆ. ಕೆಲವು ವಾರಗಳ ಹಿಂದೆ ಈ ಸುದ್ದಿಯನ್ನು ಹೊರ ಹಾಕಿ ಟಿಯುವಿ ಬಂಡಿಯ ಕಯ್ತಿಟ್ಟವನ್ನು ಮಹೀಂದ್ರಾ ಕೂಟದವರು ಬಿಡುಗಡೆಗೊಳಿಸಿದ್ದರು.

# ಕಾದಾಟದ ಟ್ಯಾಂಕರ್ ಹೋಲುವ ಬಂಡಿಯ ಈಡುಗಾರಿಕೆ






ಟಿಯುವಿಯ ಹೊರಮಯ್ ನೋಟ ಮಹೀಂದ್ರಾದವರ ಬೊಲೆರೊದಂತೆ(Bolero) ಪೆಟ್ಟಿಗೆಯಾಕಾರ ಕಂಡರೆ ಮುಂಬಾಗದ ಮುನ್ಕಂಬಿ ತೆರೆ(Front Grill) ನಿಮಗೊಮ್ಮೆ ಕ್ರಾಯ್ಸ್ಲರ್‌ನ ಜೀಪ್(Chrysler Jeep) ಬಂಡಿಯನ್ನು ನೆನೆಪಿಗೆ ತರಬಹುದು. ಹೊಸ ಸ್ಕಾರ್ಪಿಯೊ(Scorpio) ಬಂಡಿಯ 3ನೇ ಪೀಳಿಗೆಯ ಅಡಿಗಟ್ಟನ್ನೇ(Chassis) ಈ ಬಂಡಿಯಲ್ಲೂ ಬಳಸಿಕೊಂಡು, ನಮ್ಮ ಬಂಡಿ ಇತರರಿಗಿಂತ ಬೇರೆಯಾಗಿದೆ ಎಂದು ಮಹೀಂದ್ರಾ ಕೂಟದವರು ಹೇಳಹೊರಟಂತಿದೆ.

ಒಳಮಯ್ ಸ್ಕಾರ್ಪಿಯೊ ಮತ್ತು ಬೊಲೆರೊ ಬಂಡಿಗಿಂತ ಸಾಕಶ್ಟು ಸುದಾರಣೆಗೊಂಡಿವೆ. ಸ್ಕಾರ್ಪಿಯೊ ಬಂಡಿಗಿಂತ ಹೆಚ್ಚಿನ ನೆಲತೆರವು(Ground Clearance) ಹೊಂದಿದ್ದರೂ ಕೂರುಗಳನ್ನು(Seats) ಅಚ್ಚುಕಟ್ಟಾಗಿ ಜೋಡಿಸಲಾಗಿದೆ. ಬಂಡಿಯ ಒಳಗಡೆ ಕಾಲು ಚಾಚಿಕೆ(Leg room),

ತಲೆಯೊರುಗಗಳು (Head rest) ಪಯಣಿಗರ ಹಿತಕ್ಕೆ ತಕ್ಕಂತೆ ಮಾಡಲಾಗಿದ್ದು ಮನಸೆಳೆಯಲಿದೆ. ಮುಂದಿನ ಬಾಗಿಲುಗಳಿಗೆ ನೀರಿನ ಬಾಟಲ್ ಇಡಲು ಜಾಗ ಮಾಡಿಕೊಟ್ಟಿದ್ದರೆ, ಕಾಪಿಯ ದೊಡ್ಡ ಲೋಟಗಳನ್ನು ಓಡಿಸುಗರ ಪಕ್ಕದಲ್ಲಿ ಇಡುವ ಸೇರುವೆಗಳನ್ನು ನೀಡಲಾಗಿದೆ.

| ಆಯಗಳು (ಮಿಮೀ.ಗಳಲ್ಲಿ) | |
|---|---|
| ಉದ್ದ (Length) | 3995 |
| ಅಗಲ (Width) | 1835 |
| ಎತ್ತರ (Height) | 1839 |
| ಗಾಲಿಗಳ ದೂರ (wheel base) | 2680 |
| ನೆಲತೆರವು (Ground clearance) | 190 |
| ಬಂಡಿಯ ತಿರುಗರೆ(turn radius) | 5350 |

ಟಿಯುವಿ ಬಂಡಿಯಲ್ಲಿ 7 ಮಂದಿಗೆ ಕೂಡಲು ಸ್ತಳಾವಕಾಶವಿದೆ. 5 ಮಂದಿ ಪಯಣಿಗರಿದ್ದರೆ ಹಿಂಬಾಗದ ಕೂರುಗಳನ್ನು ಮಡಿಸಿ ಸರಕು ಚಾಚಿಕೆಯನ್ನು 384 ಲೀಟರ್ ನಿಂದ 720 ಲೀಟರ್‌ಗೆ ಹಿಗ್ಗಿಸಿಕೊಳ್ಳಬಹುದು.

ಟಿ-4 ಬಿಟ್ಟು ಮಿಕ್ಕಿದ್ದೆಲ್ಲ ಮಾದರಿಗಳಲ್ಲಿ ಎರಡು ಗಾಳಿಚೀಲಗಳನ್ನು ನೀಡಲಾಗಿದೆ. ಕೆಲವು ಮಾದರಿಗಳಲ್ಲಿ ಸಿಲುಕು ತಡೆತದ ಏರ್ಪಾಟನ್ನು (ABS- Anti lock Braking System) ನೀಡಲಾಗುತ್ತಿದೆ.

ಟಿಯುವಿ ಆಟೋಟದ ಬಂಡಿ ಒಟ್ಟು 6 ಬಗೆಯ ಬಣ್ಣಗಳಲ್ಲಿ ಸಿಗಲಿದೆ. ಬಿಳಿ, ಬೆಳ್ಳಿ, ಕಡುನೀಲಿ, ಕೆಂಪು, ಕಿತ್ತಳೆ ಮತ್ತು ಕಪ್ಪು ಇವೇ ಆ ಬಣ್ಣಗಳು.

| ಇತರೆ ಪರಿಚೆಗಳು | |
|---|---|
| ತೂಕ (Weight) | 2225 ಕೆ.ಜಿ.ಗಳು |
| ಉರುವಲು ಚೀಲು (Fuel tank) | 60 ಲೀ. |
| ತಡೆತ (Brakes) | ಮುಂಬಾಗ ತಟ್ಟೆ/ ಹಿಂಬಾಗ ತಮಟೆ ತಡೆತ |
| ಬೆಲೆ ಲಕ್ಶ ರೂ.ಗಳಲ್ಲಿ | 6. 92 – 9. 12 |
| ಸರಕು ಚಾಚಿಕೆ (Boot space) | 384 ಲೀ. |
| ಕೂರುವ ಜಾಗ (Seating capacity) | 7 |

**ಪಯ್ಪೋಟಿ:**

ಟಿಯುವಿ ಬಂಡಿ ಎಕೊಸ್ಪೋರ್ಟ್, ಡಸ್ಟರ್, ಟೆರ್ರಾನೊ ಬಂಡಿಗಳಿಗೆ ನೇರ ಪಣವೊಡ್ಡಲಿದೆ.

**ಬೆಲೆ:**

ಟಿಯುವಿ 3ಒಒ ಬಂಡಿಯ 7 ವಿವಿದ ಬಗೆಗಳು 6.92 ಲಕ್ಶ ರೂಪಾಯಿಗಳಿಂದ 9.12 ಲಕ್ಶ ರೂಪಾಯಿಗಳವರೆಗಿರಲಿದೆ. ವಿವಿದ ಬಗೆಗಳ ಬೆಲೆಯನ್ನು ಪಟ್ಟಿಯಲ್ಲಿ ನೀಡಲಾಗಿದೆ.

| ಟಿಯುವಿ 3ಒಒ (TUV 300) ಬೆಲೆ ಪಟ್ಟಿ<br>ಲಕ್ಶ ರೂ.ಗಳಲ್ಲಿ | |
|---|---|
| ಟಿ4 (T4) | 6.92 |
| ಟಿ4+ (T4+) | 7.25 |
| ಟಿ6 (T6) | 7.55 |
| ಟಿ6+ (T6+) | 7.80 |
| ಟಿ6+ ಎಎಮ್‌ಟಿ (T6+AMT) | 8.52 |
| ಟಿ8 (T8) | 8.40 |
| ಟಿ8 ಎಎಮ್‌ಟಿ (T8 AMT) | 9.12 |

ಕ್ವಾಂಟೋ ಮೂಲಕ ಮಹೀಂದ್ರಾ ಕಿರು ಹಲಬಳಕೆಯ ಬಂಡಿಯನ್ನು ಮೊದಲಿಗೆ ಇಂಡಿಯಾದಲ್ಲಿ ಪರಿಚಯಿಸಿದ ಕ್ಯಾತಿ ಹೊಂದಿದೆ. ಕ್ವಾಂಟೋನ ಸೋಲಿನ ಸುಳಿಯಿಂದ ಹೊರಬರಲು ಟಿಯುವಿ 3ಒಒ ನೆರವಾಗದಿದ್ದರೆ ಮುಂಬರುವ ದಿನಗಳಲ್ಲಿ ಮಹೀಂದ್ರಾ ಕೂಟಕ್ಕೆ ಕಶ್ಟದ ದಿನಗಳು ಕಟ್ಟಿಟ್ಟ ಬುತ್ತಿಯೆನ್ನುತ್ತಾರೆ ಉದ್ಯಮದ ಮಂದಿ.

*(**ಮಾಹಿತಿ ಮತ್ತು ತಿಟ್ಟ ಸೆಲೆ:** www.mahindratuv300.com, www.autocarindia.com)*

# ಅಗ್ಗದ ಕಾರುಗಳ ಕಾವೇರಿಸಿದ ಕ್ವಿಡ್

**28.09.2015**




ಬಲುದಿನಗಳಿಂದ ಸುದ್ದಿಯಲ್ಲಿದ್ದ **ರೆನೋ** (Renault) ಕೂಟದವರ **ಕ್ವಿಡ್** (Kwid) ಬಂಡಿ ಕಳೆದ ಗುರುವಾರ ಸೆಪ್ಟೆಂಬರ್ 24 ರಂದು ಬಿಡುಗಡೆಗೊಂಡಿದೆ. ಕಿಕ್ಕಿರಿದು ತುಂಬಿರುವ ಕಿರು ಹಿಂಗದ ಕಾರುಗಳ (hatchback) ಗುಂಪಿಗೆ ಮತ್ತೊಂದು ಹೊಸ ಸೇರ್ಪಡೆಯಾಗಿದೆ. ಅದರಲ್ಲೂ ಅಗ್ಗದ ಬೆಲೆಯ **ಟಾಟಾ ನಾನೊ** (Tata Nano), **ಮಾರುತಿ ಸುಜುಕಿ ಅಲ್ಟೊ** (Maruti Suzuki Alto), **ಹ್ಯುಂಡಾಯ್ ಇಯಾನ್** (Hyundai Ion) ಇವುಗಳ ಕಾದಾಟಕ್ಕೆ ಕ್ವಿಡ್ ಸೇರಿಕೊಂಡಿದೆ. ಸೇರಿಕೊಂಡಿದೆ ಎನ್ನುವುದಕ್ಕಿಂತ ಇವುಗಳನ್ನು ಮೆಟ್ಟಿ ನಿಲ್ಲಲು ಬಂದಂತಿದೆ. ಹವ್ವ ಕ್ವಿಡ್ ಬಂಡಿಯ ಬೆಲೆ ಹಾಗೂ ಅದರಲ್ಲಿರುವ ಪರಿಚೆಗಳನ್ನು ನೋಡಿದರೆ ಯಾರಾದರೂ ಹೀಗೆ ಹೇಳುತ್ತಾರೆ.

ಬಲು ವರುಶಗಳಿಂದ ಬಾರತದ ನಂಬರ್-1 ಕಾರಾಗಿ ಮೆರೆಯುತ್ತಿರುವ, ಕಳೆದ ವರುಶ ಜಗತ್ತಿನಲ್ಲಿ ಅತಿ ಹೆಚ್ಚು ಮಾರಾಟಗೊಂಡು ಜಗತ್ತಿನ ನಂ.1 ಕಾರು ಎನ್ನಿಸಿಕೊಂಡ ಮಾರುತಿ ಸುಜುಕಿ ಅಲ್ಟೊಗೆ ಕಡಿವಾಣ ಹಾಕಲು ರೆನೋ ಕೂಟದವರಿಂದ ಕ್ವಿಡ್ ಎಂಬ ಹೊಸ ಬಂಡಿ ಅಣಿಗೊಂಡಿದೆ. ಅಲ್ಟೊ ಕಾರಿಗಿಂತ ಕಡಿಮೆ ಬೆಲೆಯಲ್ಲಿ ಅಲ್ಟೊಗಿಂತ ಹೆಚ್ಚಿನ ಪರಿಚೆಗಳು (features), ಅಳವುತನವುಳ್ಳ ಕಾರೊಂದನ್ನು ಬಾರತದಲ್ಲಿ ತಂದು ತಮ್ಮ ನೆಲೆಯನ್ನು ಹರವುಗೊಳಿಸುವ ಹೊಂಚು ಹಾಕಿದ್ದು ಬೇರೆ ಯಾರೂ ಅಲ್ಲ ರೆನೋ-ನಿಸ್ಸಾನ್ ಜಂಟಿ ಕೂಟದ ಮೇಲಾಳು ಕಾರ್ಲೊಸ್ ಗೊಸ್ನ್. ಬಾರತ ಅಗ್ಗದ ಬೆಲೆ ಕೊಳ್ಳುಗರನ್ನು ಗಮನದಲ್ಲಿರಿಸಿ ಈ ಬಂಡಿ ಹಮ್ಮುಗೆಗೆ **ಕಾರ್ಲೊಸ್ ಗೊಸ್ನ್** (Carlos Ghosn) ಮುಂದಾಳುತನದ ರೆನೋ ಕಯ್ ಹಾಕಿತ್ತು.

3 ವರುಶಗಳ ಹಿಂದೆ ಡಸ್ಟರ್ (Duster) ಮೂಲಕ ತಮ್ಮ ಕೂಟ ಬಾರತದಲ್ಲಿ ನೆಲೆಯೂರುವಂತೆ ಮಾಡಿದ್ದ ಗೊಸ್ನ್ ಇದೀಗ ತಮ್ಮ ನೆಲೆಯನ್ನು ಇನ್ನಶ್ಟು ಗಟ್ಟಿಗೊಳಿಸುವತ್ತ ಹೆಜ್ಜೆ ಇಟ್ಟಿದ್ದಾರೆ. ತಿಂಗಳೊಂದಕ್ಕೆ ಸುಮಾರು 20 ರಿಂದ 25 ಸಾವಿರದಶ್ಟು ಮಾರಲ್ಪಡುವ ಅಲ್ಟೊ ಬಂಡಿಯನ್ನು ಎದುರು ಹಾಕಿಕೊಳ್ಳುವುದನ್ನು ಕೇಳಿ, ಬಾರತದ ತಾನೋಡ ಕಯ್ಗಾರಿಕೆಯಲ್ಲಿ ಅಚ್ಚರಿ ಮೂಡಿತ್ತು. ಸಾಕಶ್ಟು ಅರಕೆ ಮಾಡಿ ಒರೆಗೆ ಹಚ್ಚಿದ ನಂತರ ಇದೀಗ **ಸೆಪ್ಟೆಂಬರ್ 24** ರಂದು ಕ್ವಿಡ್ ಬಿಡುಗಡೆಯಾಗಿದೆ.

ಕಳೆದೆರಡು ತಿಂಗಳಿಂದ ಟಿವಿ, ಸುದ್ದಿಹಾಳೆ, ಮಿಂದಾಣ, ಸಾಮಾಜಿಕ ತಾಣ ಸೇರಿದಂತೆ ಎಲ್ಲೆಡೆ ಕ್ವಿಡ್ ಕಾರಿನ ಬಯಲರಿಕೆಗಳೇ ಕಂಡು ಬರುತ್ತಿವೆ. ಹೆಸರುವಾಸಿ ತಾನೋಡದ ಸುದ್ದಿ ಪತ್ರಿಕೆಗಳು, ಮಿಂದಾಣಗಳು ಕ್ವಿಡ್ ಬಗ್ಗೆ ಮೆಚ್ಚುಗೆ ತಿಳಿಸಿವೆ. ಅಲ್ಟೊ ಹಿಂದಿಕ್ಕುವುದರಲ್ಲಿ ಎರಡು ಮಾತಿಲ್ಲ ಅನ್ನುವ ಮಾತುಗಳು ಕೇಳಿ ಬಂದಿವೆ. ಬಾರತದ ಕೊಳ್ಳುಗರನ್ನು ಮತ್ತು ಮಾರುಕಟ್ಟೆಯನ್ನು ಚೆನ್ನಾಗಿ ಅರಿತು ಕ್ವಿಡ್ ಬಂಡಿ ತಯಾರು ಮಾಡಲಾಗಿದೆ ಎಂಬುದು ಮೇಲ್ನೋಟದಿಂದ ಕಂಡು ಬರುತ್ತಿದೆ.

ಕ್ವಿಡ್ ಕಾರಿನ ಹೆಚ್ಚು ಕಡಿಮೆ ಎಲ್ಲ ಬಿಡಿಬಾಗಗಳನ್ನು ಬಾರತದಲ್ಲಿ ಬೆಳೆಸಲಾಗಿದೆ. ರೆನೋ ಕೂಟ ಹೇಳುವಂತೆ ಶೇಕಡಾ 98 ರಶ್ಟು ಬಿಡಿಬಾಗಗಳನ್ನು ಬಾರತದ ಚೆನ್ನಯ್, ಬೆಂಗಳೂರು, ಪುಣೆ, ದೆಹಲಿ, ರಾಜ್‌ಕೋಟ್ ಮುಂತಾದ ಊರುಗಳಲ್ಲಿ ನೆಲೆಸಿರುವ ವಿವಿದ ತಯಾರಕರಲ್ಲಿ ಬೆಳೆಸಿ ಒರೆಗೆ ಹಚ್ಚಲಾಗಿದೆ. ಅಗ್ಗದ ಬೆಲೆಯ ಕಾರುಗಳ ಪಯ್ಪೋಟಿ ಕಾವೇರುವಂತೆ ಮಾಡಿರುವ ಕ್ವಿಡ್ ಕಾರಿನ ಒಳನೋಟ ಇಲ್ಲಿದೆ.

**ಬಿಣಿಗೆ (Engine):**

ಕ್ವಿಡ್‌ನಲ್ಲಿ 0.8 ಲೀಟರ್ ಅಳತೆಯ ಪೆಟ್ರೋಲ್ ಬಿಣಿಗೆಯೊಂದನ್ನು ಅಳವಡಿಸಲಾಗಿದೆ. 3 ಉರುಳೆಯ ಬಿಣಿಗೆಯನ್ನು ಕ್ವಿಡ್ ಕಾರಿಗೆಂದೇ ಬೆಳೆಸಲಾಗಿದೆ. 53 ಕುದುರೆಬಲದ ಈ ಪುಟ್ಟ ಬಿಣಿಗೆ 72 ನ್ಯೂಟನ್ ಮೀಟರ್ ತಿರುಗುಬಲ (Torque) ಉಂಟು ಮಾಡುತ್ತದೆ.

ಇನ್ನು, ಮಯ್ಲಿಯೋಟದಲ್ಲಿ ಇದಕ್ಕೆ ಸರಿಸಾಟಿ ಇಲ್ಲವೆಂದೇ ಹೇಳಬಹುದು. ಕ್ವಿಡ್ ಬಿಣಿಗೆಯ ಮಯ್ಲಿಯೋಟ (Mileage) ಪ್ರತಿ ಲೀಟರ್‌ಗೆ 25.17 ಕಿಲೋಮೀಟರ್. ಸದ್ಯಕ್ಕೆ ಬಾರತದಲ್ಲಿ ಹೆಚ್ಚಿನ ಮಯ್ಲಿಯೋಟ ನೀಡುವ ಪೆಟ್ರೋಲ್ ಬಿಣಿಗೆ ಇದೆಂದು ದಾಕಲೆ ಬರೆದಿದೆ.

| ರೆನೋ ಕ್ವಿಡ್ (Kwid) | |
|---|---|
| ಬಿಣಿಗೆ (Engine) | 3 ಉರುಳೆಗಳ |
| ಬಿಣಿಗೆಯ ಅಳತೆ (CC) | 0.8 ಲೀ |
| ತೆರಪುಗಳು (Valves) | ಉರುಳೆಗೆ 4 ರಂತೆ ಒಟ್ಟು 12 |
| ಕಸುವು (Power) | 53 ಹೆಚ್.ಪಿ. |
| ತಿರುಗುಬಲ (Torque) | 72 ನ್ಯೂಟನ್-ಮೀ |
| ಸಾಗಣಿ (Transmission) | 5-ವೇಗದ ಓ.ಹಿ. |
| ಮಯ್ಲಿಯೋಟ (Mileage) | 25.17 ಕಿ.ಮೀ./ಲೀ |
| ಕೆಡುಗಾಳಿ ಮಟ್ಟ (Emission Level) | ಬಿಎಸ್ 4 (BS IV) |

ಓ.ಹಿ.- ಓಡಿಸುಗನ ಹಿಡಿತದ್ದು

**ಸಾಗಣಿ (Transmission):**

ಅಗ್ಗದ ಬೆಲೆಯ ಕಾರುಗಳಲ್ಲಿ ತನ್ನಿಡಿತದ ಸಾಗಣಿ (Automatic Transmission) ದೊರೆಯುವುದು ಬಲು ಅಪರೂಪ. ಕ್ವಿಡ್ ಕೂಡ ಇದಕ್ಕೆ ಹೊರತಾಗಿಲ್ಲ, ಕೇವಲ 5-ವೇಗದ ಓಡಿಸುಗನ ಹಿಡಿತದ ಸಾಗಣಿ (Manual Transmission) ಜೋಡಿಸಲಾಗಿದೆ. ಮುಂದಿನ ವರುಶ ಕ್ವಿಡ್

ಬಂಡಿಗೆ 1 ಲೀಟರ್ ಬಿಣಿಗೆ ಜೋಡಿಸಿ ಇತರೆ ಮಾದರಿಗಳನ್ನು ಹೊರತರಲಾಗುತ್ತದೆ ಅದರಲ್ಲಿ ಓಡಿಸುಗ ಮತ್ತು ತನ್ನಿಡಿತದ ಬೆರಕೆ ಸಾಗಣಿ ಸಿಗುವ ಸಾದ್ಯತೆಯಿದೆ.

**ಹೊರನೋಟ:**



ನೋಡಲು ಸೊಗಸಾಗಿ ಕಾಣುವ ಕ್ವಿಡ್ ಕೊಳ್ಳುಗರ ಮನ ಗೆಲ್ಲುವುದು ಕಂಡಿತ. ಬಾರತದ ಕೊಳ್ಳುಗರ ನಿಟ್ಟಿನಲ್ಲಿ ಹೊರನೋಟ ಅಂದವಾಗಿದ್ದರೆ ಅರ್ದ ಯುದ್ದ ಗೆದ್ದಂತೆಯೇ ಸರಿ. ಇದು ಕ್ವಿಡ್ ವಿಶಯದಲ್ಲಿ ಹೆಚ್ಚಾಗಿ ಅನ್ವಯಿಸುತ್ತದೆ. ದೊಡ್ಡ ಗಡುಸಾದ ಮಯ್ ಹೊಂದಿರುವ ಅಗ್ಗದ ಬೆಲೆಯ ಕಾರು ಎಂಬ ಹಣೆಪಟ್ಟಿ ಹೊತ್ತಿದೆ. ಹಲವರಂತೂ ಇದು ಡಸ್ಟರ್ ಬಂಡಿಯ ಕಿರಿಯ ತಮ್ಮ ಎಂದು ಹೊಗಳಿದ್ದಾರೆ.



ಉದ್ದ, ಅಗಲ, ಎತ್ತರ ಹಾಗೂ ನೆಲ ತೆರವಿನ ವಿಶಯಗಳೆಲ್ಲದರಲ್ಲೂ ಕ್ವಿಡ್ ನೂರಕ್ಕೆ ನೂರು ಅಂಕ ಪಡೆದಿದೆ. 180 ಮಿಲಿಮೀಟರ್‌ಗಳ ನೆಲ ತೆರವು (ground clearance) ಇತ್ತಿಚೇಗೆ ಬಿಡುಗಡೆಯಾದ ಎಸ್‌ಕ್ರಾಸ್ (S Cross), ಕ್ರೇಟಾ (Creta) ಎಂಬ ಕಿರು ಆಟೋಟದ ಬಂಡಿಗಳಿಗೆ (SUV) ಸರಿಹೊಂದುತ್ತದೆ.

| ಆಯಗಳು (ಮಿಮೀ.ಗಳಲ್ಲಿ) | |
|---|---|
| ಉದ್ದ (Length) | 3679 |
| ಅಗಲ (Width) | 1579 |
| ಎತ್ತರ (Height) | 1478 |
| ಗಾಲಿಗಳ ದೂರ (wheel base) | 2422 |
| ನೆಲತೆರವು (Ground clearance) | 180 |

ಕ್ವಿಡ್ ಬಂಡಿಗೆ ರೆನೋ ಕೂಟ ಅಯ್ದು ಚೆಂದದ ಬಣ್ಣಗಳ ಆಯ್ಕೆ ನೀಡಿದೆ. ಕೆಂಪು, ಬಿಳಿ, ಕಂದು, ಬೆಳ್ಳಿ ಮತ್ತು ಮದರಂಗಿ ಹೋಲುವ ಕಡು ಹಸಿರು ಬಣ್ಣ ತೊಟ್ಟು ಕ್ವಿಡ್ ನಿಮ್ಮ ಮುಂದಿರಲಿದೆ.

**ಒಳನೋಟ:**



ಬಂಡಿಯ ಒಳನೋಟವೂ ಯಾವುದಕ್ಕೂ ಕಡಿಮೆಯಿಲ್ಲದೇ ಒಪ್ಪವಾಗಿದೆ. ಏಳು ಇಂಚಿನ ಸೋಕು ತೆರೆಯ (Touch Screen) ತಿಳಿನಲಿ ಏರ್ಪಾಟು (Infotainment System), ತಲುಪುದಾರಿ ಏರ್ಪಾಟುಗಳನ್ನು (Navigation System) ನೀಡಿರುವ ರೆನೋ ಕೂಟ, ಕ್ವಿಡ್

ಬಂಡಿಯನ್ನು ದೊಡ್ಡ ಬಂಡಿಗಳ ಗುಂಪಿನಲ್ಲಿ ನಿಲ್ಲುವಂತೆ ಮಾಡಿದೆ. ಓಡಿಸುಗನ ಮುಂಬಾಗದ ಕೂರುಗಳನ್ನು ಹಿಂದೆ ಮುಂದೆ ಮಾಡಿ ಹೊಂದಿಸಿಕೊಳ್ಳಬಹುದು.

ಎರಡು ಸರಕು ಗೂಡು (Glove box), ಎರಡು ಮುಂಬಾಗಿಲ ಬಳಿ ಬಾಟಲ್ ಕೂಡಿಡಲು ಜಾಗ ಮತ್ತು ಓಡಿಸುಗನ ಬಳಿ ಕಾಪಿ/ಚಹಾ ಕಪ್ ಸೇರಿಸಿಡಲು ಸೇರುವೆಗಳನ್ನು ಅಚ್ಚುಕಟ್ಟಾಗಿ ನೀಡಲಾಗಿದೆ. ಕೆಲವೆಡೆ ವೆಚ್ಚ ಕಡಿತಗೊಳಿಸಲು ಕೆಲವು ಪರಿಚೆಗಳಿಗೆ ಕತ್ತರಿ ಹಾಕಿದ್ದರೂ ಅವುಗಳು ಇಲ್ಲಿ ಅಷ್ಟೊಂದು ಮುಕ್ಯವೆನ್ನಿಸುವುದಿಲ್ಲ ಯಾಕೆಂದರೆ ಎದುರಾಳಿಗಳ ಬಂಡಿಗಳಲ್ಲೂ ಇಂತ ಪರಿಚೆಗಳು ಸಿಗುವುದಿಲ್ಲ.

| ಇತರೆ ಪರಿಚೆಗಳು | |
|---|---|
| ತೂಕ (Weight) | 660 ಕೆ.ಜಿ.ಗಳು |
| ಉರುವಲು ಚೀಲು (Fuel tank) | 28 ಲೀ. |
| ತಡೆತ (Brakes) | ಮುಂಬಾಗ ತಟ್ಟೆ/ ಹಿಂಬಾಗ ತಮಟೆ ತಡೆತ |
| ಬೆಲೆ ಲಕ್ಶ ರೂ.ಗಳಲ್ಲಿ | 2.57– 3.53 |
| ಸರಕು ಚಾಚಿಕೆ (Boot space) | 300 ಲೀ. |
| ಕೂರುವ ಜಾಗ (Seating capacity) | 5 |

300 ಲೀಟರ್‌ನ ದೊಡ್ಡ ಸರಕು ಚಾಚು (Boot Space) 28 ಲೀಟರ್‌ನ ಉರುವಲು ಚೀಲ (Fuel Tank) ಹೊಂದಿರುವ ಕ್ವಿಡ್ ಕಾರು 660 ಕೆಜಿ ತೂಕ ತೂಗುವ ಮೂಲಕ ಹಗುರವಾಗಿದೆ.

**ಪಯ್ಪೋಟಿ:**

ಕ್ವಿಡ್ ಕಾರು ಎದುರಾಳಿಗಿಂತ ಬಹುತೇಕ ಎಲ್ಲ ವಿಶಯಗಳಲ್ಲೂ ಮುಂದಿದೆ. ಅಲ್ಟೊ ಬಿಣಿಗೆ, ಕ್ವಿಡ್‌ನ ಬಿಣಿಗೆಗಳ ಅಳತೆಯಲ್ಲಿ ಹೆಚ್ಚಿನ ಬೇರ್ಮೆ ಕಾಣದು. ಆದರೆ ಹ್ಯುಂಡಾಯ್ ಇಯಾನ್ ಬಿಣಿಗೆಯ ಅಳತೆ 0.81 ಲೀಟರ್ ಆಗಿದ್ದು ತುಸು ಹೆಚ್ಚಿದೆ.

ಕ್ವಿಡ್ ಬಿಣಿಗೆಯ ಕಸುವು 53 ಕುದುರೆಬಲವಿದ್ದರೆ, ಅಲ್ಟೊ ಇಲ್ಲಿ 47 ಕುದುರೆಬಲ ಹೊಂದಿ ಹಿಂದೆ ಬೀಳುತ್ತದೆ. ಇಯಾನ್ ಬಿಣಿಗೆ 54 ಕುದುರೆಬಲದ ಕಸುವು ಪಡೆದಿದೆ. ಬಿಣಿಗೆಯ ತಿರುಗುಬಲ ಇಯಾನ್ ಬಂಡಿಯಲ್ಲಿ 74.5 ನ್ಯೂಟನ್ ಮೀ ಇದ್ದರೆ ಕ್ವಿಡ್ 72 ಮತ್ತು ಮಾರುತಿ ಸುಜುಕಿ ಅಲ್ಟೊ 69 ನ್ಯೂಟನ್ ಮೀಟರ್‌ಗಳಶ್ಟು ತಿರುಗುಬಲ ಉಂಟು ಮಾಡುತ್ತದೆ.

ಮೂರು ಬಂಡಿಗಳ ಆಯಗಳ ಹೋಲಿಕೆಯಲ್ಲಿ ಕ್ವಿಡ್ ಮುಂಚೂಣಿಯಲ್ಲಿದೆ. ಉದ್ದ, ಅಗಲ, ಗಾಲಿಗಳ ನಡುವಣ ದೂರ ಹೀಗೆ ಎಲ್ಲದರಲ್ಲೂ ಕ್ವಿಡ್ ಮುಂದೆ ಅಲ್ಟೊ, ಇಯಾನ್ ಕಾರುಗಳು ಮಂಡಿಯೂರುತ್ತವೆ. ತಲುಪುದಾರಿ, ತಿಳಿನಲಿ ಮುಂತಾದ ಏರ್ಪಾಟುಗಳು ಕೂಡ ಇತರೆ ಬಂಡಿಗಳಲ್ಲಿ ಕಾಣಸಿಗಲಾರದು.

| ಹೋಲಿಕೆ ಪಟ್ಟಿ | | | |
|---|---|---|---|
| ಕಾರು ಮಾದರಿ | ಕ್ವಿಡ್ | ಅಲ್ಟೊ | ಇಯಾನ್ |
| ಬಿಣಿಗೆಯ ಅಳತೆ | 0.8 | 0.8 | 0.81 |
| ಉರುಳೆಗಳು | ಎಲ್ಲವೂ 3 ಉರುಳೆಗಳದ್ದು | | |
| ಕಸುವು ಹೆಚ್.ಪಿ | 53 | 47 | 54 |
| ತಿರುಗುಬಲ ನ್ಯೂ.ಮೀ | 72 | 69 | 74 |
| ಸಾಗಣಿ | ಎಲ್ಲವೂ 5-ವೇಗದ ಓ.ಹಿ. | | |

| ಆಯಗಳ ಹೋಲಿಕೆ ಪಟ್ಟಿ | | | |
|---|---|---|---|
| ಕಾರು ಮಾದರಿ | ಕ್ವಿಡ್ | ಅಲ್ಟೊ | ಇಯಾನ್ |
| ಉದ್ದ | 3679 | 3395 | 3495 |
| ಅಗಲ | 1579 | 1490 | 1550 |
| ನೆಲ ತೆರವು | 180 | 160 | 170 |
| ಸರಕು ಚಾಚು (ಲೀ.) | 300 | 177 | 215 |

ಆಯಗಳೆಲ್ಲವು ಮಿಲಿಮೀಟರ್‌ಗಳಲ್ಲಿ

**ಬೆಲೆ:**

ಈ ಬಂಡಿಯ ಎಕ್ಸ್-ಶೋ ರೂಮ್ ಆರಂಬಿಕ ಬೆಲೆ 2.57 ಲಕ್ಶ ರೂಪಾಯಿಗಳು ಅಶ್ಟೇ. RXE, RXL, RXT ಎಂಬ ಮಾದರಿಗಳು ಹೆಚ್ಚಿನ ಪರಿಚೆಗಳನ್ನು ನೀಡಲಿದ್ದು ಇವುಗಳ ಬೆಲೆ 2.88, 3.11 ಮತ್ತು 3.44 ಲಕ್ಶಗಳಲ್ಲಿ ಸಿಗುತ್ತವೆ. ಒಂದು ತಿಂಗಳ ಮೊದಲೇ ಮುಂಗಡ ಕಾಯ್ದಿರಿಸುವಿಕೆ ಶುರುವಾಗಿದೆ. 20-25 ಸಾವಿರ ರೂಪಾಯಿ ನೀಡಿ ಕಾರನ್ನು ಕಾಯ್ದಿರಿಸಬಹುದು.

| ರೆನೋ ಕ್ವಿಡ್ (Kwid) ಬೆಲೆ ಪಟ್ಟಿ<br>ಲಕ್ಷ ರೂ.ಗಳಲ್ಲಿ | |
|---|---|
| ಮಾದರಿ | ಬೆಲೆ |
| ಸ್ಟ್ಯಾಂಡರ್ಡ್ (STD) | 2.53 |
| ಆರ್ಎಕ್ಸ್ಇ (RXE) | 2.88 |
| ಆರ್ಎಕ್ಸ್ಎಲ್ (RXL) | 3.11 |
| ಆರ್ಎಕ್ಸ್ಟಿ (RXT) | 3.44 |
| ಆರ್ಎಕ್ಸ್ಟಿ-ಒ (RXT-O) | 3.53 |

ಕೊಳ್ಳುಗರು ತಮ್ಮ ಚೂಟಿಯುಲಿ (Smart Phone) ಮೂಲಕವೂ ಬಂಡಿಯನ್ನು ಕಾಯ್ದಿರಿಸುವ ಅವಕಾಶವಿದೆ. ಇದಕ್ಕೆಂದೇ ಒಂದು ಬಳಕವನ್ನು (Application) ಸಿದ್ದಪಡಿಸಲಾಗಿದೆ. ಬಳಕದಲ್ಲಿ ಕ್ವಿಡ್ ಬಂಡಿಯ ಎಲ್ಲ ಮಾಹಿತಿಗಳು ಸಿಗುತ್ತವೆ. ಬಳಕದ ಮೂಲಕ ಕೇವಲ 5000 ರೂಪಾಯಿ ಮುಂಗಡ ಹಣ ನೀಡಿ ಬಂಡಿ ಕಾಯ್ದಿರಿಸಬಹುದು. ಬಂಡಿ ಕೊಳ್ಳಲೆಂದು ಹುಬ್ಬಳ್ಳಿಯ ರೆನೋ ಮಳಿಗೆಗೆ ಕರೆ ನೀಡಿದಾಗ ತಿಳಿದು ಬಂದಿದ್ದು ಅಕ್ಟೋಬರ್ ಮೊದಲ ವಾರ ಮಳಿಗೆಯಲ್ಲಿ ಕ್ವಿಡ್ ಕಾರು ಕಾಣ ಸಿಗಲಿವೆಯಂತೆ.

ಬಂಡಿ ಕರೀದಿಸಲೇ ಬೇಕೆಂಬುವವರು ಆದಶ್ಟು ಬೇಗ ಮುಂಗಡ ಕಾಯ್ದಿರಿಸುವುದು ಒಳಿತಂತೆ. ಬಂಡಿಯ ಬೆಲೆ ತಿಳಿಯುತ್ತಿದ್ದಂತೆ ಸಾಕಶ್ಟು ಕೊಳ್ಳುಗರು ರೆನೋ ಮಳಿಗೆಗಳಿಗೆ ಮುಗಿಬಿದ್ದಿದ್ದು, ನೀವು ಮುಂಗಡ ನೀಡಿ ಕಾರು ಪಡೆಯಲು ಸರದಿಯಲ್ಲಿ ತಿಂಗಳಗಟ್ಟಲೆ ಕಾಯಬೇಕಾದ ಪರಿಸ್ತಿತಿ ಬಂದರೂ ಬರಬಹುದು.

*(ಮಾಹಿತಿ ಮತ್ತು ತಿಟ್ಟ ಸೆಲೆ: www.renault.co.in, www.autocarindia.com)*

# ಇಗೊ ಬಂದಿದೆ ಹೊಸ ಪಿಗೊ

**06.10.2015**




ಈ ವರುಶ ಹೊಸ ಬಂಡಿಗಳ ವರುಶವೆಂದೇ ಕರೆಯಬಹುದು. ಈ ಮೊದಲಿನ ಬರಹವೊಂದರಲ್ಲಿ ಹೇಳಿದಂತೆ ಒಂದರ ಹಿಂದೊಂದು ಬಂಡಿಗಳು ಸಾಲಾಗಿ ಬಿಡುಗಡೆಯಾಗುತ್ತಲೇ ಇವೆ. ಕಳೆದ ಬುದವಾರ ಸೆಪ್ಟೆಂಬರ್ 23 ರಂದು ಅತ್ತ ಅಗ್ಗದ ಕ್ವಿಡ್ ಕಾರು ಬಿಡುಗಡೆಗೊಳ್ಳಲಿರುವ ಗಳಿಗೆಯ ಎಣಿಕೆ ಹಾಕುತ್ತಿದ್ದರೆ ಇತ್ತ ಹೊಸ ಮೊಗ ತೊಟ್ಟ ಎರಡನೇ ತಲೆಮಾರಿನ **ಪೋರ್ಡ್ ಪಿಗೊ** (Ford Figo) ದೆಹಲಿಯಲ್ಲಿ ಸುದ್ದಿಹಾಳೆ ಮತ್ತು ಮಾದ್ಯಮದ ಮಂದಿಯ ಮುಂದೆ ಪಿಳಿ ಪಿಳಿ ಕಣ್ಣು ಬಿಡುತ್ತಿತ್ತು. ಸರಿ ಸುಮಾರು ಒಂದು ತಿಂಗಳ ಹಿಂದೆ ಪಿಗೊ ಅಸ್ಪಾಯರ್ (Figo Aspire) ಬೀದಿಗಿಳಿಸಿದ್ದ ಪೋರ್ಡ್ , ಅದೇ ಅಸ್ಪಾಯರ್‌ನ ಕಿರು ಹಿಂಗದ (hatchback) ಮಾದರಿಯನ್ನು ಇದೀಗ ಹೊರ ತಂದಿದೆ.

ಇತ್ತಿಚೀನ ದಿನಗಳಲ್ಲಿ ಪೋರ್ಡ್ ಒಳ್ಳೊಳ್ಳೆ ಬಂಡಿಗಳನ್ನು ಬಾರತದಲ್ಲಿ ಹೊರತರುತ್ತ ಹೆಸರುವಾಸಿಯಾಗಿದೆ. ಸಾಟಿಯಿಲ್ಲದ ಪರಿಚೆಗಳ ಮೂಲಕ ಬಿಡುಗಡೆಗೊಂಡ ಅಸ್ಪಾಯರ್ ಮೊದಲ ತಿಂಗಳಲ್ಲೇ ಕಿರು ಸೆಡಾನ್ ಮಾದರಿಗಳಲ್ಲಿ ಎರಡನೇ ಸ್ತಾನಕ್ಕೇರಿದೆ. ಪಿಗೊ ಅಸ್ಪಾಯರ್ ಬೆನ್ನಲ್ಲೇ ಹೊಸದಾಗಿಸಿದ ಪಿಗೊ ಬಂದಿದ್ದು ಹಬ್ಬದ ದಿನಗಳಲ್ಲಿ ಮಾರಾಟವನ್ನು ಹೆಚ್ಚಿಸುವಲ್ಲಿ ನೆರವಾಗಬಹುದು. ಈ ಮೂಲಕ ಹೆಚ್ಚಿನ ಮಾರುಕಟ್ಟೆಯನ್ನು ಕಬಳಿಸುವ ತವಕದಲ್ಲಿದೆ ಪೋರ್ಡ್.

ಆರು ವರುಶಗಳ ಹಿಂದೆ ಅಂದರೆ 2009ರ ಸೆಪ್ಟೆಂಬರ್ 23 ರಂದು ಮೊದಲ ತಲೆಮಾರಿನ ಪಿಗೊ ಬಾರತದಲ್ಲಿ ಕಾಣಿಸಿಕೊಂಡಿತ್ತು. ಹೊಸ ಪೀಳಿಗೆಯ ಪಿಗೊ ಕಾರಿಗೂ ಕೂಡ ಅದೇ ದಿನಾಂಕವನ್ನೇ ಮುಹೂರ್ತವಾಗಿ ಆಯ್ದುಕೊಂಡಿದ್ದು ವಿಶೇಶ. ಕಳೆದ 5-6 ವರುಶಗಳಲ್ಲಿ ಮೂರು ಲಕ್ಕಕ್ಕೂ ಹೆಚ್ಚು ಪಿಗೊ ಬಂಡಿಗಳು ಬಾರತದ ಹಾದಿಬೀದಿಗಳಲ್ಲಿ ಸಾಗುತ್ತಿವೆ. ಅಲ್ಲದೇ ಹೊರ ದೇಶಗಳಿಗೂ ಕಳುಹಿಸಲ್ಪಟ್ಟಿವೆ. ಈ ಗೆಲುವನ್ನೇ ಮರುಕಳಿಸುವ ಗುರಿ ನಮ್ಮದು ಎಂದು ಪೋರ್ಡ್ ಇಂಡಿಯಾದ ಮೇಲಾಳು ನಯ್ಜೆಲ್ ಹ್ಯಾರಿಸ್ (Nigel Harris) ಬಿಡುಗಡೆಯ ಸಮಾರಂಬದಲ್ಲಿ ಹೇಳಿಕೊಂಡಿದ್ದಾರೆ. ಹೊಸ ತಲೆಮಾರಿನ ಪಿಗೊ ಮಯ್ಮಾಟ ಹೇಗಿದೆ? ಮಯ್ಲಿಯೋಟ ಎಶ್ಟು? ಬೆಲೆ ಮೂಲಕ ಎದುರಾಳಿಗಳ ನಿದ್ದೆಗೆಡಸಲಿದೆಯೇ? ಈ ಎಲ್ಲ ಕೇಳ್ವಿಗಳ ಉತ್ತರ ಕೆಳಗಿನ ವಿವರದಲ್ಲಿ ತಿಳಿದುಕೊಳ್ಳಬಹುದು.

**ಬಿಣಿಗೆ (Engine):**

ಪಿಗೊ ಬಂಡಿ ಒಟ್ಟು ಮೂರು ಬಗೆಯ ಬಿಣಿಗೆಯಲ್ಲಿ ತಯಾರುಗೊಂಡಿದೆ. ಅಸ್ಪಾಯರ್ ಬಂಡಿಯಲ್ಲಿರುವ ಅದೇ ಬಿಣಿಗೆಗಳನ್ನು ಇದರಲ್ಲೂ ಉಳಿಸಿಕೊಳ್ಳಲಾಗಿದೆ. ಇಂದಿನ ಬಹುತೇಕ ಬಂಡಿ ಕೂಟಗಳು ಇದನ್ನೇ ಮುಂದುವರೆಸಿಕೊಂಡು ಬರುತ್ತಿವೆ. ಸೆಡಾನ್, ಕಿರು ಹಿಂಗದ ಎರಡು ಮಾದರಿಗಳನ್ನು ಮಾರುಕಟ್ಟೆಯಲ್ಲಿ ಬಿಡುಗಡೆ ಮಾಡಿರುತ್ತಾರೆ ಆದರೆ ಎರಡರಲ್ಲೂ ಅದೇ ಬಿಣಿಗೆಗಳ ಆಯ್ಕೆ ನೀಡಿರುತ್ತಾರೆ. ಎತ್ತುಗೆಗೆ:

ಸುಜುಕಿರವರ ಸ್ವಿಫ್ಟ್ (Swift) ಮತ್ತು ಸ್ವಿಫ್ಟ್ ಡಿಜಾಯರ್ (Swift Dzire), ಟಾಟಾ ಬೋಲ್ಟ್ ಮತ್ತು ಜೇಸ್ಟ್ (Bolt & Zest), ಟೊಯೊಟಾ ಲಿವಾ (Liva) ಮತ್ತು ಲಿವಾ ಇಟಿಯೊಸ್ (Liva Etios). ಇದನ್ನೇ ಪೋರ್ಡ್ ಕೂಡ ಮುಂದುವರೆಸಿದೆ.

ಪೆಟ್ರೋಲ್ ಮಾದರಿಗಳಿಗಾಗಿ ಹೊಚ್ಚ ಹೊಸ ಟಿಆಯ್-ವಿಸಿಟಿ(Ti-VCT) ಬಿಣಿಗೆಯು 87 ಹಾಗೂ 110 ಕುದುರೆಬಲ ಹೀಗೆ ಎರಡು ಕಸುವಿನ ಆಯ್ಕೆಗಳಲ್ಲಿ ಇರಲಿದೆ. ಇದರ ಮಯ್ಲಿಯೋಟ(Mileage) ಲೀಟರ್‌ಗೆ 18.1 ಕಿಲೋಮೀಟರ್. ಡಿಸೇಲ್ ಉರುವಲಿನ ಟಿಡಿಸಿಆಯ್(TDCI) ಬಿಣಿಗೆ 100 ಕುದುರೆಬಲದ ಕಸುವಿನದಾಗಿದೆ. ಲೀಟರ್‌ವೊಂದಕ್ಕೆ 25.83 ಕಿಲೋಮೀಟರ್ ಓಡುವ ಇದು ಪೋರ್ಡ್‌ಕೂಟದವರು ಬೆಳೆಸಿದ ಒಳ್ಳೆಯ ಬಿಣಿಗೆಗಳಲ್ಲೊಂದು.

| ಎರಡನೇಯ ಪೀಳಿಗೆಯ ಪಿಗೊ (Figo) | | | |
|---|---|---|---|
| ಬಿಣಿಗೆ (Engine) | ಟಿಆಯ್-ವಿಸಿಟಿ | ಟಿಆಯ್-ವಿಸಿಟಿ | ಟಿಡಿಸಿಆಯ್ |
| ಬಿಣಿಗೆಯ ಅಳತೆ (CC) ಲೀ. ಗಳಲ್ಲಿ | 1.2 | 1.2 | 1.5 |
| ಕಸುವು (Power) ಹೆಚ್.ಪಿ. ಗಳಲ್ಲಿ | 88 | 110 | 100 |
| ತಿರುಗುಬಲ (Torque) ನ್ಯೂಟನ್-ಮೀ.ಗಳಲ್ಲಿ | 112 | 136 | 215 |
| ಸಾಗಣಿ (Transmission) | 5-ವೇಗದ ಓ.ಹಿ. | 6-ವೇಗದ ತ.ಹಿ. | 5-ವೇಗದ ಓ.ಹಿ. |
| ಮಯ್ಲಿಯೋಟ (Mileage) ಕಿ.ಮೀ./ಲೀ. ಗಳಲ್ಲಿ | 18.1 | 18.1 | 25.83 |
| ಕೆಡುಗಾಳಿ ಮಟ್ಟ (Emission Level) | ಬಿಎಸ್ 4 (BS IV) | | |

ಓ.ಹಿ.- ಓಡಿಸುಗನ ಹಿಡಿತದ್ದು
ತ.ಹಿ.-ತನ್ನ ಹಿಡಿತದ್ದು

**ಸಾಗಣಿ (Transmission):**

ಪಿಗೊ ಬಂಡಿಯ ಡಿಸೇಲ್ ಮತ್ತು ಪೆಟ್ರೋಲ್ ಮಾದರಿಗಳಲ್ಲಿ 5-ವೇಗದ ಓಡಿಸುಗನ ಹಿಡಿತದ ಸಾಗಣಿ ಅಳವಡಿಸಿದ್ದಾರೆ. ಪೆಟ್ರೋಲ್ ಬಂಡಿಯ ಹಿರಿಯ ಮಾದರಿಯೊಂದರಲ್ಲಿ 6-ವೇಗದ ತನ್ನಿಡಿತದ ಸಾಗಣಿಯ ಆಯ್ಕೆಯಿದೆ. ಡಿಸಿಟಿ(DCT) ಚಳಕದ ಸುದಾರಿತ ಹಲ್ಲುಗಾಲಿಯನ್ನು(Gear box) ಈ ತನ್ನಿಡಿತದ ಸಾಗಣಿಯ ಬಂಡಿಯಲ್ಲಿ ಕೊಡಲಾಗಿದೆ. ಪೋಕ್ಸ್‌ವ್ಯಾಗನ್ ಪೊಲೊ ಜಿಟಿ ಟಿಎಸ್‌ಆಯ್ (Polo GT TSI) ಬಂಡಿಯ ಬಿಟ್ಟರೆ ಇಶ್ಟು ಕಡಿಮೆಯ ಬೆಲೆಯ ಕಾರುಗಳಲ್ಲಿ ಡಿಸಿಟಿ ಚಳಕದ ಹಲ್ಲುಗಾಲಿ ಸಿಗುತ್ತಿರುವುದು ಪೋರ್ಡ್ ಪಿಗೊದಲ್ಲಿ ಮಾತ್ರ.

**ಹೊರನೋಟ:**




ಹಳೆಯ ಫಿಗೊಗಿಂತ ಹೊಸ ಫಿಗೊದ ಮಯ್ಮಾಟ ಸಾಕಶ್ಟು ಬೇರೆಯಾಗಿದೆ. ಉದ್ದ, ಅಗಲ, ಎತ್ತರ ಮತ್ತು ಗಾಲಿಗಳ ನಡುವಿರುವ ದೂರ ಹೀಗೆ ಎಲ್ಲದರಲ್ಲೂ ಹೊಸ ಫಿಗೊ ದೊಡ್ಡದಾಗಿದೆ. ಸರಕು ಚಾಚಿಕೆಯಲ್ಲಿ ಹಳೆಯ ಫಿಗೊಗಿಂತ ತುಸು ಕಡಿಮೆಯಿದ್ದದ್ದು ಬಿಟ್ಟರೆ ಹೊಸ ಫಿಗೊ ಗಟ್ಟಿಮುಟ್ಟಾಗಿದೆ. ಅಸ್ಪಾಯರ್ ಕಾರಿನ ಅಡಿಕಟ್ಟನ್ನೇ ಉಳಿಸಿಕೊಂಡು ಹೊಸ ತಲೆಮಾರಿನ ಫಿಗೊ ತಯಾರಿಸಿದ್ದು ನೋಡುಗರಿಗೆ ಸೊಗಸಾಗಿ ಕಾಣುವಂತೆ ಮಾಡಿದೆ.

| ಆಯಗಳು (ಮಿಮೀ.ಗಳಲ್ಲಿ) | |
|---|---|
| ಉದ್ದ (Length) | 3886 |
| ಅಗಲ (Width) | 1695 |
| ಎತ್ತರ (Height) | 1525 |
| ಗಾಲಿಗಳ ದೂರ (wheel base) | 2491 |
| ನೆಲತೆರವು (Ground clearance) | 174 |
| ಬಿರುಗರೆ (Turning radius) | 4900 |

ಇಂದಿನ ಹೆಚ್ಚಿನ ತಯಾರಕರು ತಾವು ಬಿಡುಗಡೆ ಮಾಡಿದ್ದ ಕಾರುಗಳಿಗೆ 2-3 ವರುಶಗಳ ನಂತರ ಹೊಸ ಮೊಗ ತೊಡಿಸಿ ಮರು ಬಿಡುಗಡೆ ಮಾಡಿರುತ್ತಾರೆ. ಇದರಲ್ಲಿ ಕೇವಲ ಮುಂದೀಪ (Head lamp), ಹಿಂದೀಪ (Tail lamp) ಇಲ್ಲವೇ ಮುನ್ಕಂಬಿ ತೆರೆ (Front Grill) ಇಂತಹ ಚಿಕ್ಕ ಪುಟ್ಟ ಬದಲಾವಣೆ ಮಾಡಿರುತ್ತಾರೆ. ಎರಡನೇಯ ತಲೆಮಾರಿನ ಫಿಗೊ ಕೇವಲ ಹೊಸ ಮೊಗ ತೊಟ್ಟು ಬಂದಿಲ್ಲ. ಇದು ಹಲವು ರೀತಿಯಲ್ಲಿ ಬದಲಾಗಿದೆ.

ಪೋರ್ಡ್ ಪಿಗೊ 7 ಚೆಂದ ಚಿತ್ತಾರದ ಬಣ್ಣಗಳಲ್ಲಿ ಬರುತ್ತಿದೆ. ಬಿಳಿ, ಕಪ್ಪು, ಕೆಂಪು, ಕಡು ನೀಲಿ, ಬೆಳ್ಳಿ, ಕಂದು ಮತ್ತು ತಾಮ್ರದಂತೆ ಹೊಳೆಯುವ ಕೇಸರಿ ಬಣ್ಣಗಳಲ್ಲಿ ಪಿಗೋ ಬಲು ಅಂದವಾಗಿ ಕಾಣುತ್ತದೆ.

**ಒಳನೋಟ:**

ದಿಟ್ಟ ಹೊರಮಯ್ ಹೊಂದಿರುವ ಪಿಗೊ ಕಾರಿನಲ್ಲಿ ಒಳಮಯ್ ಕೂಡ ಅಶ್ಟೇ ಹದವಾಗಿಸಲಾಗಿದೆ. ಸಿಂಕ್ (SYNC) ಹೆಸರಿನ ತಿಳಿನಲಿ ಏರ್ಪಾಟು (Infotainment system) ಬಂಡಿಯಲ್ಲಿ ನೀಡಿದ್ದು ವಿಶೇಶ. ಓಡಿಸುಗರಿಗೆ ಇದು ಹೆಚ್ಚು ಹಿಡಿಸಲಿದೆ. ನಿಮ್ಮ ಚೂಟಿಯುಲಿಯನ್ನು ಇದಕ್ಕೆ ಜೋಡಿಸಿದರೆ ಸಾಕು, ತೋರುಮಣೆಯೇ ನಿಮ್ಮ ಚೂಟಿಯುಲಿಯಾಗಿ ಮಾರ್ಪಡುತ್ತದೆ. ಪಿಗೊ ಅಸ್ಪಾಯರ್ ಬಂಡಿಯನ್ನು ಕೊಂಡಿರುವ ಗೆಳೆಯರೊಬ್ಬರು ಈ ಸಿಂಕ್ ತಿಳಿನಲಿ ಏರ್ಪಾಟಿನ ಬಗ್ಗೆ ಬಲು ಮೆಚ್ಚುಗೆಯ ಮಾತನಾಡಿದ್ದಾರೆ. ಇದು ತುಂಬಾ ಗುಣಮಟ್ಟದ್ದು, ಇತರೆ ಹಿಂಗದ ಕಾರುಗಳಲ್ಲಿ ಬರುವಂತದಲ್ಲ. ಅಗ್ಗದ ಬೆಲೆಯ ಕಾರೊಂದರಲ್ಲಿ ಇದನ್ನು ನೀಡಿದ್ದು ಕಂಡಿತವಾಗಿಯೂ ಕೊಳ್ಳುಗರ ಮನಸೂರೆಗೊಳ್ಳಲಿದೆಯಂತೆ.

ಮೊದಲಿನ ಪಿಗೊಗಿಂತ ದೊಡ್ಡದಾಗಿರುವ ಹೊಸ ಪಿಗೊದಲ್ಲಿ ಕಯ್, ಕಾಲು ಮತ್ತು ತಲೆ ಚಾಚಲು ಹೆಚ್ಚಿನ ಜಾಗವಿದೆ. ಓಡಿಸುಗ ಸೇರಿದಂತೆ ಒಟ್ಟು ಅಯ್ವರು ಸಾಗಲು ಇದೊಳ್ಳೆ ಬಂಡಿ. ಮುಂಬಾಗದ ಸರಕು ಗೂಡಿನಲ್ಲಿ (Glove box) ಎರಡು ಬಾಟಲ್ ಸೇರುವೆಗಳನ್ನು ನೀಡಲಾಗಿದೆ. ಹಿಂಬಾಗದಲ್ಲಿ ಕೇವಲ ಒಂದು ಬಾಟಲ್ ಸೇರುವೆ ಅಶ್ಟೇ ನೀಡಿದ್ದು ಹಿಂದೆ ಕೂರುವ ಪಯಣಿಗರಿಗೆ ತುಸು ನಿರಾಶೆಯಾಗಬಹುದು.

ಪೋರ್ಡ್ ಮಾಯ್ ಡಾಕ್ (My Dock) ಎಂಬ ಚೂಟಿಯುಲಿ ಗೂಡೊಂದು ಓಡಿಸುಗರಿಗೆ ನೆರವಾಗಲು ತೋರುಮಣೆಯ ಮೇಲ್ಬಾಗದಲ್ಲಿ ಮಾಡಲಾಗಿದೆ. ಇದರಲ್ಲಿ ನಿಮ್ಮ ಚೂಟಿಯುಲಿಯನ್ನು ಬೀಳದಂತೆ ಇಟ್ಟುಕೊಳ್ಳಬಹುದು. ತಮ್ಮ ಚೂಟಿಯುಲಿಯ ತಲುಪುದಾರಿ ಏರ್ಪಾಟನ್ನೇ (Navigation System) ಬಳಸಿಕೊಂಡು ಸಾಗುವವರಿಗೆ ಇದು ಬಲು ಸಹಾಯವಾಗಲಿದೆ. ಬಂಡಿಯ ಒಳಬಾಗದಲ್ಲಿ ಕೆಲವೆಡೆ ಬಳಕೆ ಮಾಡಿರುವ ಪ್ಲಾಸ್ಟಿಕ್ ಪರವಾಗಿಲ್ಲ ಎನ್ನುವ ಮಟ್ಟಿಗಿದೆ. ಇನ್ನೂ ಕೆಲವೆಡೆ ಪರಿಚೆಗಳನ್ನು ಕಡಿಮೆಗೊಳಿಸಿ ಕೊಳ್ಳುಗರ ಜೇಬಿಗೆ ಕತ್ತರಿ ಬೀಳದಂತೆ ನೋಡಿಕೊಂಡಿದ್ದಾರೆ ಎನ್ನುವುದು ಎದ್ದು ಕಾಣುತ್ತದೆ.

| ಇತರೆ ಪರಿಚೆಗಳು | |
|---|---|
| ಉರುವಲು ಚೀಲ (Fuel tank) | ಪೆಟ್ರೋಲ್ 42 ಲೀ./ ಡಿಸೇಲ್ 40 ಲೀ. |
| ತಡೆತ (Brakes) | ಮುಂಬಾಗ ತಟ್ಟೆ/ ಹಿಂಬಾಗ ತಮಟೆ ತಡೆತ |
| ಸರಕು ಚಾಚಿಕೆ (Boot space) | 257 ಲೀ. |
| ಕೂರುವ ಜಾಗ (Seating capacity) | 5 |

ಪಿಗೊ ಬಂಡಿಯ ಮಗದೊಂದು ವಿಶೇಶವೆಂದರೆ ಅದರರಲ್ಲಿನ ಕಾಪಿನ (safety) ಪರಿಚೆಗಳು. ಕಾಪಿನ ವಿಶಯದಲ್ಲಿ ರಾಜಿಮಾಡಿಕೊಳ್ಳುವ ಮಾತೇ ಇಲ್ಲ ಎನ್ನುತ್ತ ಎದುರಾಳಿಗಳಿಗೆ ಸೆಡ್ಡು ಹೊಡೆದಿದೆ ಪಿಗೊ. ಹವ್ದು ಪಿಗೊ ಬಂಡಿಯ ಎಲ್ಲ ಬಗೆಗಗಳಲ್ಲೂ ಕಡಿಮೆಯೆಂದರೂ 2 ಗಾಳಿಚೀಲ (Airbag) ಮತ್ತು ಇತರೆ ಮೇಲ್ಮಟ್ಟದ ಬಗೆಗಳಲ್ಲಿ ಒಟ್ಟು ಆರು ಗಾಳಿಚೀಲ ಒದಗಿಸಿರುವುದು ಈ ಮಾತನ್ನು ದಿಟವಾಗಿಸಿದೆ.

ಕೆಲವು ಮೇಲ್ಮಟ್ಟದ ಮಾದರಿಗಳಲ್ಲಿ ಸಿಲುಕಿನ ತಡೆತ (ABS) ಮುಂತಾದ ಹೆಚ್ಚಿನ ಕಾಪಿನ ಪರಿಚೆಗಳನ್ನು ಆಯ್ಕೆಯಾಗಿ ಕೊಟ್ಟಿದ್ದಾರೆ.

**ಪಯ್ಪೋಟಿ:**

ಸುಜುಕಿಯವರ ಸ್ವಿಪ್ಟ್ (Suzuki Swift), ಹ್ಯುಂಡಾಯ್ ರವರ ಗ್ರ್ಯಾಂಡ್ ಆಯ್-10 (Hyundai Grand i-10) ಗಳಿಗೆ ಹೊಸ ಪಿಗೊ ನೇರಾನೇರ ಎದುರಾಳಿ. ಎತ್ತರದಲ್ಲಿ ಸ್ವಿಪ್ಟ್ ಗಿಂತ 5 ಮಿಲಿಮೀಟರ್ ಕಿರಿದಾಗಿರುವ ಪಿಗೊ ಅಗಲ, ಉದ್ದ, ಮತ್ತು ಗಾಲಿಗಳ ನಡುವಿನ ದೂರ

ಇವುಗಳಲ್ಲಿ ಎದುರಾಳಿಗಳಿಗಿಂತ ಹೆಚ್ಚಿದೆ. ಗ್ರ್ಯಾಂಡ್ ಆಯ್-10 ಗಿಂತ 9 ಮಿಲಿಮೀಟರ್, ಸ್ವಿಪ್ಟ್ ಗಿಂತ ನಾಲ್ಕು ಮೀಲಿಮೀಟರ್ ಹೆಚ್ಚಿನ ನೆಲತೆರವು ಪಿಗೊವನ್ನು ಮುಂಚೂಣಿ ಸ್ತಾನದಲ್ಲಿರಿಸಿದೆ.

| ಆಯಗಳ ಹೋಲಿಕೆ ಪಟ್ಟಿ | | | |
|---|---|---|---|
| ಕಾರು ಮಾದರಿ | ಪಿಗೊ | ಸ್ವಿಪ್ಟ್ | ಆಯ್-10 |
| ಉದ್ದ | 3886 | 3850 | 3750 |
| ಅಗಲ | 1695 | 1695 | 1660 |
| ನೆಲ ತೆರವು | 174 | 170 | 165 |
| ಗಾಲಿಗಳ ದೂರ | 2491 | 2430 | 2425 |
| ಎತ್ತರ | 1525 | 1530 | 1520 |

ಎಲ್ಲವೂ ಮಿಲಿಮೀಟರ್.ಗಳಲ್ಲಿ

ಪಿಗೊದಲ್ಲಿರುವ ಟಿಆಯ್-ವಿಸಿಟಿ ಪೆಟ್ರೋಲ್ ಬಿಣಿಗೆ ಸ್ವಿಪ್ಟ್, ಆಯ್-10 ಗಳಲ್ಲಿನ ಬಿಣಿಗೆಯಶ್ಟೇ ಅಳತೆಯದ್ದು ಆದರೂ ಅವುಗಳಿಗಿಂತ ಕೊಂಚ ಹೆಚ್ಚಿನ ಕಸುವಿನದ್ದಾಗಿದೆ. 110 ಹೆಚ್‌ಪಿಯ ಇನ್ನೊಂದು ಪೆಟ್ರೋಲ್ ಬಿಣಿಗೆಯ ಆಯ್ಕೆ ಇತರೆ ಎದುರಾಳಿಗಳಲ್ಲಿ ಕಾಣದು.

| ಪೆಟ್ರೋಲ್ ಮಾದರಿಗಳ ಹೋಲಿಕೆ ಪಟ್ಟಿ | | | |
|---|---|---|---|
| ಕಾರು ಮಾದರಿ | ಪಿಗೊ | ಸ್ವಿಪ್ಟ್ | ಆಯ್-10 |
| ಬಿಣಿಗೆಯ ಅಳತೆ ಲೀ. ಗಳಲ್ಲಿ | 1.2 | 1.2 | 1.2 |
| ಉರುಳೆಗಳು | ಎಲ್ಲವೂ ನಾಲ್ಕು ಉರುಳೆಗಳದ್ದು | | |
| ಕಸುವು ಹೆಚ್.ಪಿ | 87 | 83 | 82 |
| ತಿರುಗುಬಲ ನ್ಯೂ.ಮೀ | 112 | 115 | 114 |

| ಡಿಸೇಲ್ ಮಾದರಿಗಳ ಹೋಲಿಕೆ ಪಟ್ಟಿ | | | |
|---|---|---|---|
| ಕಾರು ಮಾದರಿ | ಪಿಗೊ | ಸ್ವಿಪ್ಟ್ | ಆಯ್-10 |
| ಬಿಣಿಗೆಯ ಅಳತೆ ಲೀ. ಗಳಲ್ಲಿ | 1.5 | 1.3 | 1.1 |
| ಉರುಳೆಗಳು | ಎಲ್ಲವೂ ನಾಲ್ಕು ಉರುಳೆಗಳದ್ದು | | |
| ಕಸುವು ಹೆಚ್.ಪಿ | 100 | 74 | 70 |
| ತಿರುಗುಬಲ ನ್ಯೂ.ಮೀ | 215 | 190 | 160 |

ಬೆಲೆಯ ವಿಶಯದಲ್ಲೂ ಎದುರಾಳಿಗಳನ್ನು ಬಗ್ಗು ಬಡಿದಿರುವ ಪಿಗೊ, ಸ್ವಿಫ್ಟ್ ಇಲ್ಲವೇ ಆಯ್-10 ಕೊಳ್ಳುಬೇಕೆನ್ನುವವರನ್ನು ತನ್ನತ್ತ ಸೆಳೆದುಕೊಳ್ಳುವುದು ನಿಜ.

**ಬೆಲೆ:**

ಪೆಟ್ರೋಲ್ ಮಾದರಿ ಆರಂಬಿಕ ಬೆಲೆಯು 4.29 ಲಕ್ಶ ರೂಪಾಯಿಗಳಾಗಿರುತ್ತದೆ. ಪೆಟ್ರೋಲ್ ಮಾದರಿಯ ಇತರೆ ಬಗೆಗಳಾದ ಅಂಬಿಯಂಟ್ (Ambiente), ಟ್ರೆಂಡ್ (Trend), ಟಯ್ಟಾನಿಯಮ್ (Titanium) ಮತ್ತು ಟಯ್ಟಾನಿಯಮ್ ಪ್ಲಸ್ (Titanium Plus) ಗಳು 4.56, 5, 5.75 ಮತ್ತು 6.40 ಲಕ್ಶ ರೂಪಾಯಿಗಳ ಬೆಲೆ ಹೊಂದಿವೆ. ತನ್ನಿಡಿತದ ಸಾಗಣಿಯ ಪೆಟ್ರೋಲ್ ಬಂಡಿ 6.91 ಲಕ್ಶ ರೂ.ಗಳಲ್ಲಿ ದೊರೆಯಲಿದೆ.

ಡಿಸೇಲ್ ಮಾದರಿ ಬೇಸ್‌ನದ್ದು 5.29 ಲಕ್ಶ ರೂಪಾಯಿಗಳು. ಇದರಲ್ಲಿ ಅಂಬಿಯಂಟ್, ಟ್ರೆಂಡ್, ಟಯ್ಟಾನಿಯಮ್ ಮತ್ತು ಟಯ್ಟಾನಿಯಮ್ ಪ್ಲಸ್ ಬಗೆಗಳು 5.62, 5.97, 6.72 ಮತ್ತು 7.40 ಲಕ್ಶ ರೂ.ಗಳಲ್ಲಿ ದೊರೆಯಲಿವೆ. ಇವೆಲ್ಲವೂ ಎಕ್ಸ್ ಶೋರೂಮ್ ದೆಹಲಿಯ ಬೆಲೆಗಳಾಗಿರುತ್ತವೆ.

| ಬೆಲೆಗಳ ಹೋಲಿಕೆ ಪಟ್ಟಿ | | | |
|---|---|---|---|
| | ಪಿಗೊ | ಸ್ವಿಫ್ಟ್ | ಆಯ್-10 |
| ವಿವಿದ ಬಗೆಗಳ ಬೆಲೆ ಲಕ್ಶ.ರೂ ಗಳಲ್ಲಿ | 4.29 | 4.65 | 4.73 |
| | 4.56 | 4.78 | 4.92 |
| | 5.00 | 5.40 | 5.32 |
| | 5.75 | 6.24 | 5.59 |

ಬೆಳಗಾವಿ, ಕಲ್ಬುರ್ಗಿ, ಬಳ್ಳಾರಿ, ಬೆಂಗಳೂರು ಸೇರಿದಂತೆ ಕರ್ನಾಟಕದಲ್ಲಿ ಮಾರಾಟ ಬೆಲೆಯು ಇಂತಿದೆ: ಪೆಟ್ರೋಲ್ ಬೇಸ್ -4.38, ಅಂಬಿಯಂಟ್ - 4.66, ಟ್ರೆಂಡ್- 5.10, ಟಯ್ಟಾನಿಯಮ್-5.87 ಮತ್ತು ಟಯ್ಟಾನಿಯಮ್ ಪ್ಲಸ್- 6.53 ಲಕ್ಶ ರೂ.ಗಳು. ತನ್ನಿಡಿತದ ಸಾಗಣಿಯ ಪೆಟ್ರೋಲ್ ಬಂಡಿ 7.05 ಲಕ್ಶಕ್ಕೆ ದೊರೆಯಲಿದೆ.

ಡಿಸೇಲ್ ಬೇಸ್ -5.40, ಅಂಬಿಯಂಟ್ - 5.74, ಟ್ರೆಂಡ್- 6.09, ಟಯ್ಟಾನಿಯಮ್-6.86 ಮತ್ತು ಟಯ್ಟಾನಿಯಮ್ ಪ್ಲಸ್- 7.55 ಲಕ್ಶ.ರೂಗಳು.

ಎಲ್ಲವೂ ಎಕ್ಸ್ ಶೋ ರೂಮ್ ಬೆಲೆಗಳಾಗಿವೆ. ನೀವು ಬಂಡಿ ಕೊಳ್ಳುವಾಗ ಇದಕ್ಕೆ ರಸ್ತೆ ತೆರಿಗೆ, ಮುನ್ಗಾಪು (insurance), ನೋಂದಾಯಿಸುವಿಕೆ ಬೆಲೆಗಳು ಸೇರಿಸಬೇಕಾಗುತ್ತದೆ. ಇವುಗಳು ಆಯಾ ನಾಡಿನ ತೆರಿಗೆಗೆ ತಕ್ಕಂತೆ ಬದಲಾಗುತ್ತವೆ. ಬಂಡಿ ಕೊಳ್ಳಲು ಆಸಕ್ತಿ ಇದ್ದವರು ಹತ್ತಿರದ ಪೋರ್ಡ್ ಮಳಿಗೆಗಳಲ್ಲಿ ವಿಚಾರಿಸಿ ವಿವರ ಪಡೆಯಬಹುದು.

ಮಂದಿಗೆ ಹಿಡಿಸುವಂತೆ ಹಳೆಯ ಪಿಗೊವನ್ನು ತಯಾರಿಸಿ, ಅದನ್ನು ಗೆಲುವಿನ ಕುದುರೆಯನ್ನಾಗಿ ಮಾಡಿದ್ದ ಪೋರ್ಡ್ ಇಂಡಿಯಾ ಕೂಟಕ್ಕೆ ಅದನ್ನೇ ಹೊಸ ಪಿಗೊದಲ್ಲಿ ಮರುಕಳಿಸುವಾಸೆ. ಒಳಿತಾಗಲಿ.

*(**ಮಾಹಿತಿ ಮತ್ತು ತಿಟ್ಟ ಸೆಲೆ:** www.india.ford.com, www.autocarindia.com)*